ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ


# ಸಹಕಾರ

ಮಾಸಪತ್ರಿಕೆ

ಸಂಪುಟ : 8 । ಸಂಚಿಕೆ : 1 । ಜನವರಿ 2026 । ಪುಟಗಳು : 20 । ಬೆಲೆ : 25/-




## ಸಮಸ್ತ ಸಹಕಾರಿ ಬಂಧುಗಳಿಗೆ 2026ರ ನೂತನ ವರ್ಷ,






# ಮುಖ್ಯಮಂತ್ರಿಗಳ ಭೇಟಿ : ಕೃತಜ್ಞತೆ ಸಲ್ಲಿಕೆ




ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕಿಗೆ ನಿರ್ದೇಶಕರುಗಳಾಗಿ ಆಯ್ಕೆಯಾಗಿರುವ ಎಸ್. ಚಂದ್ರಶೇಖರ್ ಹಾಗೂ ಜಿ.ಎನ್. ಮಂಜುನಾಥ್ ಅವರು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರನ್ನು ಭೇಟಿಮಾಡಿ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಜನತಾ ಬಜಾರ್ ಅಧ್ಯಕ್ಷರಾದ ಯುಎಸ್ ರಮೇಶ್. ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾದ ಮಹೇಶ್. ಜನತಾ ಬಜಾರ್ ನಿರ್ದೇಶಕರಾದ ಎನ್.ಮಂಜುನಾಥ್ ಹಾಗೂ ಮುಖಂಡರುಗಳು ಹಾಜರಿದ್ದರು.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಇದರ ನಿರ್ದೇಶಕರಾಗಿ ಆಯ್ಕೆಯಾಗಿರುವ ಎಸ್.ಚಂದ್ರಶೇಖರ್ ಮತ್ತು ಜಿ.ಎನ್.ಮಂಜುನಾಥ ರವರುಗಳನ್ನು ಮಾಜಿ ನಗರಪಾಲಿಕೆ ಸದಸ್ಯರಾದ ಗೋಪಿ, ಮರ್ಚಂಟ್ಸ್ ಬ್ಯಾಂಕ್ ಉಪಾಧ್ಯಕ್ಷರಾದ ಎಂ.ಎನ್. ಮಹೇಶ್, ಜನತಾ ಬಜಾರ್ ಅಧ್ಯಕ್ಷರಾದ ಯು.ಎಸ್.ರಮೇಶ್, ನಿರ್ದೇಶಕರಾದ ಎನ್.ಮಂಜುನಾಥ ಎಂ.ಎ. ನಯನಕುಮಾರ್, ಮುಖಂಡರಾದ ಎಂ.ಸುಪುತ್ರ, ಪ್ರವೀಣ್‌ಕುಮಾರ್. ಹೆಚ್.ಬಿ ಉಲ್ಲಾಸ್. ಎಂ.ಎಸ್. ಮಹಾದೇವಸ್ವಾಮಿರವರುಗಳು ಶುಭಕೋರಿ ಅಭಿನಂದನೆ ಸಲ್ಲಿಸಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್‌ಗೆ ನಿರ್ದೇಶಕರಾಗಿ ಆಯ್ಕೆಯಾಗಿರುವ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್. ಚಂದ್ರಶೇಖರ್ ಅವರನ್ನು ಕರ್ನಾಟಕ ರಾಜ್ಯ ಲಿಕ್ಕರ್ ಸೊಸೈಟಿಯ ನಿರ್ದೇಶಕರುಗಳಾದ ಹನುಮಂತಗೌಡ, ಜಿ.ಆರ್. ಚನ್ನಕೇಶವ, ರಾಜ್ಯ ಕುರಿ ಮತ್ತು ಉಣ್ಣೆ ಮಹಾಮಂಡಳದ ಅಧ್ಯಕ್ಷರಾದ ರಮೇಶ್ ಹಾಗೂ ನಿರ್ದೇಶಕರಾದ ಎನ್.ಮಂಜುನಾಥ್ ರವರುಗಳು ಅಭಿನಂದಿಸಿ ಶುಭಕೋರಿದರು.



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಎಸ್. ಚಂದ್ರಶೇಖರ್
ಅಧ್ಯಕ್ಷರು



ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು



ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು



ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಉಮೇಶ ಶಿ. ಬಾಳಿ
ನಿರ್ದೇಶಕರು



ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು



ವೈ. ಶ್ರೀನಿವಾಸಗೌಡ
ನಿರ್ದೇಶಕರು



ಕೆ. ಜಗದೀಶ ಕಂದಿಕೆರೆ
ನಿರ್ದೇಶಕರು



ರಾಜೇಶ್ ಟಿ.
ನಿರ್ದೇಶಕರು



ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು



ಹೆಚ್. ಅಶೋಕ್
ನಿರ್ದೇಶಕರು




ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು



ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


SAHAKARA VARTHA PATHRIKE KANNADA MONTHLY
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



**ಎಸ್. ಚಂದ್ರಶೇಖರ್**
**ಅಧ್ಯಕ್ಷರು**

ವಿಶೇಷವಾಗಿ ಭಾರತದ ಸಹಕಾರ ಚಳುವಳಿ ಗ್ರಾಮೀಣ ಜನರನ್ನು ಹೊಂದಿದೆ. ಗ್ರಾಮೀಣ ಆರ್ಥಿಕತೆಯನ್ನು ಹೆಚ್ಚಿಸಿ, ಸ್ಥಳೀಯ ಮಟ್ಟದಲ್ಲಿ ಉತ್ಪಾದನೆ, ಉದ್ಯೋಗ ಸೃಷ್ಟಿ ಮೂಲಸೌಕರ್ಯಗಳಿಗೆ ಹೆಚ್ಚು ಹೊತ್ತು ನೀಡಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಭಾರತ ಸ್ವಾತಂತ್ರ್ಯ ಶತಮಾನೋತ್ಸವ ವೇಳೆಗೆ ನಾವೆಲ್ಲರೂ ಈ ಸಮಯದಿಂದಲೇ ಗುರಿ–ಸಾಧನೆಗಳ ಬಗ್ಗೆ ಚಿಂತನ–ಮಂಥನ ನಡೆಸಿ ನಮ್ಮ ಸಹಕಾರ ಚಳುವಳಿಯನ್ನು ಬಲಪಡಿಸಬೇಕಾದ ಅಗತ್ಯವಿದೆ.

# ಸಹಕಾರ ಸಂಸ್ಥೆಗಳಿಂದ ವಿಕಸಿತ ಭಾರತ ನಿರ್ಮಾಣ

ಭಾರತದ ಸಹಕಾರ ಚಳವಳಿ ವಿಶ್ವದಲ್ಲಿಯೇ ಬೃಹತ್ತಾದುದು. ವಿಶ್ವದ 830 ಕೋಟಿ ಜನಸಂಖ್ಯೆಗೆ ಹೋಲಿಸಿದಾಗ 100 ಕೋಟಿಗೂ ಅಧಿಕ ಜನರು ಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದಾರೆ.

ಭಾರತದ 8 ಲಕ್ಷಕ್ಕೂ ಅಧಿಕ ಸಹಕಾರ ಸಂಘಗಳಲ್ಲಿ 30 ಕೋಟಿಗೂ ಅಧಿಕ ಸದಸ್ಯರಿದ್ದಾರೆ. ಕೃಷಿ ಪತ್ತಿನ ವಲಯ, ಹೈನುಗಾರಿಕೆ, ಬ್ಯಾಂಕಿಂಗ್, ವಸತಿ ವಲಯಗಳು ಗರಿಷ್ಠ ಸಂಖ್ಯೆಯ ಸಹಕಾರ ಸಂಘಗಳನ್ನು ಹೊಂದಿವೆ.

2047 ಭಾರತೀಯರ ಪಾಲಿಗೆ ಅತ್ಯಂತ ಮಹತ್ವದ ವರ್ಷ. ಭಾರತ ಸ್ವಾತಂತ್ರ್ಯ ಗಳಿಸಿ ನೂರು ವರ್ಷಗಳ ಸಂಭ್ರಮಾಚರಣೆಗೆ ನಾವೆಲ್ಲರೂ ಎಲ್ಲಾ ಕ್ಷೇತ್ರಗಳ ಮೂಲಕ ಬಲಿಷ್ಠ ಆರ್ಥಿಕತೆಯ ರಾಷ್ಟ್ರವನ್ನಾಗಿ ಮಾಡುವ ಬಗ್ಗೆ ಸಂಕಲ್ಪ ತೊಡಬೇಕಾಗಿದೆ.

ವಿಶೇಷವಾಗಿ ಭಾರತದ ಸಹಕಾರ ಚಳುವಳಿ ಗ್ರಾಮೀಣ ಜನರನ್ನು ಹೊಂದಿದೆ. ಗ್ರಾಮೀಣ ಆರ್ಥಿಕತೆಯನ್ನು ಹೆಚ್ಚಿಸಿ, ಸ್ಥಳೀಯ ಮಟ್ಟದಲ್ಲಿ ಉತ್ಪಾದನೆ, ಉದ್ಯೋಗ ಸೃಷ್ಟಿ ಮೂಲಸೌಕರ್ಯಗಳಿಗೆ ಹೆಚ್ಚು ಹೊತ್ತು ನೀಡಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಭಾರತ ಸ್ವಾತಂತ್ರ್ಯ ಶತಮಾನೋತ್ಸವ ವೇಳೆಗೆ ನಾವೆಲ್ಲರೂ ಈ ಸಮಯದಿಂದಲೇ ಗುರಿ–ಸಾಧನೆಗಳ ಬಗ್ಗೆ ಚಿಂತನ–ಮಂಥನ ನಡೆಸಿ ನಮ್ಮ ಸಹಕಾರ ಚಳುವಳಿಯನ್ನು ಬಲಪಡಿಸಬೇಕಾದ ಅಗತ್ಯವಿದೆ.

ಈ ನಿಟ್ಟಿನಲ್ಲಿ ಮಹಿಳೆಯರಿಗೆ, ಯುವ ಜನರಿಗೆ ಸಹಕಾರ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ವೃತ್ತಿಪರತೆ ಹೆಚ್ಚಿಸಿಕೊಳ್ಳಲು ಜಾಗೃತಿ ಮೂಡಿಸಬೇಕಾಗಿದೆ. ಸಹಕಾರ ಚಳವಳಿಯ ಮೂಲಕ ಸ್ವಾವಲಂಬನೆ ಸಾಧಿಸಲು ಹೊಸ ವಲಯಗಳನ್ನು ಗುರುತಿಸುವುದು ನಮ್ಮೆಲ್ಲರ ಜವಾಬ್ದಾರಿಯು ಆಗಿದೆ. ಹೊಸ ವಲಯಗಳ ಸೃಜನೆಯಿಂದ ಆರ್ಥಿಕತೆಗೆ ಪುಷ್ಟಿ ನೀಡಬೇಕಾಗಿದೆ. ಈಗಿರುವ ಸಹಕಾರ ಸಂಘಗಳನ್ನು ವ್ಯವಸ್ಥಿತವಾಗಿ, ಪರಿಣಾಮಕಾರಿಯಾಗಿ, ಬದ್ಧತೆ – ದಕ್ಷತೆಯಿಂದ ಮುನ್ನಡೆಸುವುದು ಕೂಡ ಅಷ್ಟೇ ಸವಾಲಿನ ಕೆಲಸವಾಗಿದೆ.

ಈ ನಿಟ್ಟಿನಲ್ಲಿ ನಾವೆಲ್ಲರೂ ಬದ್ಧತೆಯಿಂದ ಶ್ರಮಿಸಬೇಕಾಗಿದೆ. 2026ರ ನೂತನ ವರ್ಷ, ಮಕರ ಸಂಕ್ರಾಂತಿ ಮತ್ತು ಭಾರತ ಗಣರಾಜ್ಯೋತ್ಸವ ಶುಭಾಶಯಗಳನ್ನು ಆಡಳಿತ ಮಂಡಳಿ ಪರವಾಗಿ ಸಲ್ಲಿಸುತ್ತಿದ್ದೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :

**ಶ್ರೀ ಎಸ್. ಚಂದ್ರಶೇಖರ್**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು

**ಶ್ರೀ ಧರೇಪ್ಪ ಮಹದೇವ ಆಲಗೂರ,**

ಸಂಪಾದಕರು :

**ಪ್ರಜ್ವಲ್ ಕೆ.ಎನ್.** ಮುಖ್ಯಕಾರ್ಯನಿರ್ವಹಣಾಧಿಕಾರಿ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034

ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

## ಮುಖ್ಯಮಂತ್ರಿಗಳ ಭೇಟಿ



ಸನ್ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್. ಚಂದ್ರಶೇಖರ್, ಉಪಾಧ್ಯಕ್ಷರಾದ ಧರೇಪ್ಪ ಮಹದೇವ ಆಲಗೂರ, ನಿರ್ದೇಶಕರುಗಳಾದ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ ಮತ್ತು ರವೀಂದ್ರ ಪ್ರಲ್ಹಾದ ಕಲಬುರ್ಗಿರವರು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.

ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.

- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಏಳು ಮಂದಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ

# ತುಮಕೂರು ಡಿಸಿಸಿ ಬ್ಯಾಂಕ್ ವ್ಯಾಪ್ತಿಯಲ್ಲಿ ಸಾಲ ಪಡೆದು ಮೃತಪಟ್ಟ ಸದಸ್ಯರ 25 ಸಾವಿರ ಸಾಲ ಮನ್ನಾ : ಶಾಸಕ ಕೆ.ಎನ್. ರಾಜಣ್ಣ

**ತುಮಕೂರು:** ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ (ಡಿಸಿಸಿ) ಸಾಲ ಪಡೆದು ಮೃತಪಟ್ಟ ರೈತರ ರೂ. 25 ಸಾವಿರ ಮನ್ನಾ ಮಾಡಲು ನಿರ್ಧರಿಸಲಾಗಿದೆ ಎಂದು ತುಮಕೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ಎನ್. ರಾಜಣ್ಣ ಹೇಳಿದರು.

ನಗರದಲ್ಲಿ ಡಿಸೆಂಬರ್ 6 ರಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ತುಮಕೂರು ಡಿಸಿಸಿ ಬ್ಯಾಂಕ್, ತುಮಕೂರು ಹಾಲು ಒಕ್ಕೂಟ ಹಾಗೂ ಜಿಲ್ಲಾ ಸಹಕಾರಿ ಯೂನಿಯನ್ ವತಿಯಿಂದ ಏರ್ಪಡಿಸಿದ್ದ ಸಹಕಾರ ಸಮ್ಮೇಳನ ಹಾಗೂ ಜಿಲ್ಲೆಯ ಸಹಕಾರ ರತ್ನ ಪುರಸ್ಕೃತರ 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಿ. 31ರ ಒಳಗೆ ಒಂದೇ ಕಂತಿನಲ್ಲಿ ಸಾಲ ಮರು ಪಾವತಿ ಮಾಡಿದರೆ ರೂ. 25 ಸಾವಿರ ಮನ್ನಾ ಮಾಡಲಾಗುವುದು. ಈ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗಿದೆ. ಸಾಲ ಪಡೆದ ರೈತರು ಸಾಲ ಸದ್ಬಳಕೆ ಮಾಡಿಕೊಂಡು ಸಕಾಲದಲ್ಲಿ ಮರುಪಾವತಿ ಮಾಡಬೇಕು ಎಂದು ಸಲಹೆ ಮಾಡಿದರು.

ಸಹಕಾರಿಗಳು ಪಕ್ಷಾತೀತ, ಜಾತ್ಯತೀತವಾಗಿ ಸಹಕಾರ ಆಂದೋಲನದಲ್ಲಿ ಕೆಲಸ ಮಾಡಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಆರ್ಥಿಕವಾಗಿ ಸದೃಢವಾಗಬೇಕು ಎಂಬುವುದು ನಮ್ಮೆಲ್ಲರ ಗುರಿ. ಅದರಂತೆಯೇ ಕಾರ್ಯ ನಿರ್ವಹಿಸುತ್ತಿದ್ದೇವೆ. ಎಷ್ಟೇ ಎಕರೆ ಜಮೀನು ಇದ್ದರೂ ರೈತ ಆರ್ಥಿಕವಾಗಿ ಸದೃಢವಾಗುತ್ತಿಲ್ಲ. ಸಾಲದ ಹೊರೆ ಏರಿಕೆಯಾಗುತ್ತಿದೆ. ಸಾಲದಿಂದ ಮುಕ್ತರಾಗಲು ಕೃಷಿಯ ಜತೆಗೆ ಹೈನುಗಾರಿಕೆ, ಮೀನುಗಾರಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆಯಂತಹ ಉಪ



ಕಸುಬು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು. ಸರ್ಕಾರ ಕೃಷಿಗೆ ಪೂರಕವಾದ ಸಲಕರಣೆಗಳು, ರಸಗೊಬ್ಬರ, ಬಿತ್ತನೆ ಬೀಜವನ್ನು ಕಡಿಮೆ ದರದಲ್ಲಿ ಒದಗಿಸಬೇಕು. ಲಾಭದಾಯಕ ಬೆಳೆ ಬೆಳೆಯಲು ಮಾರ್ಗದರ್ಶನ ಮಾಡಬೇಕು ಎಂದು ತಿಳಿಸಿದರು.

ಶಾಸಕ ಜಿ.ಬಿ. ಜ್ಯೋತಿಗಣೇಶ್, 'ರಾಜಣ್ಣ ಸಹಕಾರ ಕ್ಷೇತ್ರಕ್ಕೆ ಶಕ್ತಿ ಕೊಟ್ಟಿದ್ದಾರೆ. ಸಹಕಾರ ಕ್ಷೇತ್ರದ ನೆರವಿನಿಂದ ಸಾಮಾನ್ಯ ಕುಟುಂಬದ ಜನರು ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿದೆ', ಗ್ರಾಮೀಣ ಜನರು ಹೈನುಗಾರಿಕೆಯಂತಹ ಉಪಕಸಬುಗಳನ್ನು ಅಳವಡಿಸಿಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸಲು ಸಲಹೆ ಮಾಡಿದರು.

ತುಮುಲ್ ಅಧ್ಯಕ್ಷರು ಹಾಗೂ ಶಾಸಕರಾದ ಎಚ್.ವಿ. ವೆಂಕಟೇಶ್ ಅವರು ಮಾತನಾಡಿ, ಶಾಸಕ ಕೆ.ಎನ್. ರಾಜಣ್ಣ ಅವರು ಬಡವರ ಪಾಲಿನ ಆಪತ್ಬಾಂದವರಾಗಿದ್ದಾರೆ. ಎಲ್ಲಾ ಸಮುದಾಯಗಳ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಜನರ ನೆರವಿಗೆ ಸದಾ ನಿಂತಿರುತ್ತಾರೆ. ಇವರು ಸಹಕಾರ ಸಚಿವರಾಗಿ ತಂದ ಕಾನೂನು ತಿದ್ದುಪಡಿಗಳು ಸಹಕಾರ ಕ್ಷೇತ್ರದ ಬಲವರ್ಧನೆಗೆ ಪೂರಕವಾಗಿವೆ ಎಂದರು. ತುಮಕೂರು ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಪ್ರಸ್ತುತ 10 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಮುಂಬರುವ ದಿನಗಳಲ್ಲಿ 15 ಲಕ್ಷ ಲೀಟರ್ ಹಾಲು ಸಂಗ್ರಹಣೆಗೆ ಗುರಿ ಹೊಂದಲಾಗಿದೆ. ಡಿಸಿಸಿ ಬ್ಯಾಂಕ್ ಮುಂದಾಳತ್ವದಲ್ಲಿ ಪ್ಯಾಕ್ಸ್‌ಗಳ ಮೂಲಕ ಹೈನುಗಾರಿಕೆಗೆ ನೆರವು ನೀಡಲಾಗುವುದು ಎಂದರು.

ಸಹಕಾರ ರತ್ನ ಪುರಸ್ಕೃತರಾದ ಟಿ.ಕೆ. ನಂಜುಂಡಪ್ಪ, ಡಿ. ನಾಗರಾಜಯ್ಯ, ಕೆ.ಎ. ದೇವರಾಜ್, ಕೆ.ಎನ್. ಗೋವಿಂದರಾಜು, ಎಂ.ಎಸ್. ವಿಶ್ವನಾಥ, ಕೆ.ಜಿ. ಜಗದೀಶ್, ಹೆಚ್. ಆರ್. ರೇವಣ್ಣ ಅವರುಗಳನ್ನು ಗಣ್ಯರು ಸನ್ಮಾನಿಸಿ, ಗೌರವಿಸಿ, ಅಭಿನಂದಿಸಿದರು. ಸನ್ಮಾನಿತರ ಪರವಾಗಿ ಟಿ.ಕೆ. ನಂಜುಂಡಪ್ಪ ಮತ್ತು ಡಿ. ನಾಗರಾಜಯ್ಯ ಅವರು ಸಹಕಾರ ಕ್ಷೇತ್ರದ ಬೆಳವಣಿಗೆ ಕುರಿತು ಮಾತನಾಡಿದರು. ಸಹಕಾರ ಮಹಾಮಂಡಳ ನಿರ್ದೇಶಕರಾದ ಎನ್. ಗಂಗಣ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಗಣ್ಯರನ್ನು ಸ್ವಾಗತಿಸಿದರು.

ವೇದಿಕೆಯ ಮೇಲೆ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಬಿ.ಜಿ. ವೆಂಕಟೇಗೌಡ, ಸಹಕಾರ ಸಂಘಗಳ ನಿಬಂಧಕ ಟಿ.ಎಚ್.ಎಂ.ಕುಮಾರ್, ಡಿಸಿಸಿ ಬ್ಯಾಂಕ್ ಸಲಹೆಗಾರ ಜಿ.ಎಸ್. ರಮಣರೆಡ್ಡಿ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್,

ಕಾರ್ಯದರ್ಶಿ ಅಶ್ವತ್ಥನಾರಾಯಣ, ಬೆಂಗಳೂರು ಪ್ರಾಂತ್ಯ ಜಂಟಿ ನಿಬಂಧಕರಾದ ಡಾ. ಜಿ. ಉಮೇಶ್, ಡಿಸಿಸಿ ಬ್ಯಾಂಕ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಂಗಮಪ್ಪ, ತುಮುಲ್ ವ್ಯವಸ್ಥಾಪಕ ನಿರ್ದೇಶಕರಾದ ಜಿ. ಶ್ರೀನಿವಾಸ್, ಉಪನಿಬಂಧಕರಾದ ಮೂರ್ತಿ, ಸಹಕಾರಿ ಮುಖಂಡರಾದ ಸಿ.ವಿ. ಮಹಾಲಿಂಗಪ್ಪ, ರಾಮಮೂರ್ತಿ, ಎಸ್.ಆರ್. ಗೌಡ, ಸಿದ್ದಗಂಗಪ್ಪ, ಪ್ರಕಾಶ್, ಡಿ. ಕೃಷ್ಣಕುಮಾರ್, ನಾಗೇಶ್‌ಬಾಬು, ಕಾರ್ಯಕ್ರಮ ಸಂಚಾಲಕರು ಹಾಗೂ




ಮಹಾಮಂಡಳದ ಸಂಪರ್ಕಾಧಿಕಾರಿ ಟಿ.ಎನ್. ಕೇಶವ, ಜಿಲ್ಲಾ ಯೂನಿಯನ್ ಸಿಇಒ ಮಹಾಂತೇಶ ಹಿರೇಮಠ ಸೇರಿದಂತೆ ಡಿಸಿಸಿ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರ ಯೂನಿಯನ್‌ಗಳ ನಿರ್ದೇಶಕರುಗಳು, ಅಧಿಕಾರಿಗಳು ಇತರರು ಪಾಲ್ಗೊಂಡಿದ್ದರು.

## ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ವೃತ್ತಿಪರ ಕೌಶಲ್ಯ ಅಗತ್ಯ : ಜಂಟಿ ನಿಬಂಧಕರಾದ ಅಶ್ವತ್ಥನಾರಾಯಣ

**ಬೆಂಗಳೂರು** : ವೃತ್ತಿಪರ ಕೌಶಲ್ಯವನ್ನು ಹೆಚ್ಚಿಸಿಕೊಂಡು ಸಹಕಾರ ಸಂಘಗಳ ಆಡಳಿತದಲ್ಲಿ ಗುಣಮಟ್ಟ ಕಾಯ್ದುಕೊಂಡರೆ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾಗುತ್ತದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಕಾರ್ಯದರ್ಶಿಗಳಾದ ಅಶ್ವತ್ಥನಾರಾಯಣ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ, ಸಮೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ : 09–12–2025 ರಂದು ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂತಾರಾಷ್ಟ್ರೀಯ ಸಹಕಾರ ವರ್ಷಾಚರಣೆ 2025ರ ಪ್ರಯುಕ್ತ "ಸಹಕಾರ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸುತ್ತವೆ" ಎಂಬ ಧ್ಯೇಯವಾಕ್ಯದೊಂದಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟಗಳ ಮೂಲಕ ಇಡೀ ರಾಜ್ಯದ್ಯಾಂತ ಎಲ್ಲಾ ಸಹಕಾರ ಸಂಘಗಳಿಗೆ ಪರಿಣಾಮಕಾರಿಯಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರಾಜ್ಯದಲ್ಲಿ 8 ಕೆ.ಐ.ಸಿ.ಎಂ ತರಬೇತಿ ಕೇಂದ್ರಗಳ ಮೂಲಕ ಡಿ.ಸಿ.ಎಂ. ತರಬೇತಿ ನೀಡುತ್ತಿದ್ದು,



ತರಬೇತಿಯನ್ನು ಪಡೆದುಕೊಂಡರೆ ಸಿಬ್ಬಂದಿಗಳು ಪದೋನ್ನತಿ ಹೊಂದಲು ಸಹಾಯವಾಗುತ್ತದೆ. ಅಲ್ಲದೆ ನಿರುದ್ಯೋಗಿಗಳು ಸಹಕಾರ ಕ್ಷೇತ್ರದ ಮೂಲಕ ತಮ್ಮ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಜೆ. ಮಂಜುನಾಥ್‌ರವರು ಮಾತನಾಡುತ್ತಾ, ಮಹಾಮಂಡಳದ ಮೂಲ ಉದ್ದೇಶ ಶಿಕ್ಷಣ ತರಬೇತಿ ಪ್ರಚಾರ. ಇದರ ಮೂಲಕ ಮಹಾಮಂಡಳವು ನೀಡಿದಂತಹ ಅನುದಾನವನ್ನು ಬಳಸಿಕೊಂಡು ಜಿಲ್ಲಾ ಒಕ್ಕೂಟಗಳು ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಹ ವಿಶೇಷ ಕಾರ್ಯಕ್ರಮ ನೀಡುತ್ತಿದೆ ಎಂದರು.

ಒಕ್ಕೂಟದ ನಿರ್ದೇಶಕರಾದ ಹೆಚ್.ಟಿ. ನಾಗೇಶ್, ಸಮೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಮಹಾಂತೇಶ್‌ರವರುಗಳು ಕಾರ್ಯಕ್ರಮ ಕುರಿತು ಮಾತನಾಡಿದರು.

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರುಗಳಾದ ಶ್ರೀನಿವಾಸ ಗೌಡ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಸಂಘದ ಸಿಬ್ಬಂದಿ ಅಶೋಕ್ ಎಲ್ಲರನ್ನು ಸ್ವಾಗತಿಸಿದರು, ಒಕ್ಕೂಟದ ಸಹಕಾರ ಶಿಕ್ಷಕರಾದ ಸಿ.ಎಂ ಲಕ್ಷ್ಮಿ ಅವರು ಕಾರ್ಯಕ್ರಮ ನಿರೂಪಿಸಿದರು. ಮಂಜುನಾಥ್ ಸಿಂಗ್, ನಿವೃತ್ತ ಉಪನಿಬಂಧಕರು ಇವರು "ಸಾಲ ವಸೂಲಾತಿಯಲ್ಲಿ ಕಾನೂನಾತ್ಮಕ ಕ್ರಮಗಳ" ಕುರಿತು, ಸ್ವಾರ್ ವೆಂಕಟೇಶ್, ರಾಜ್ಯ ತರಬೇತಿದಾರರು, ಇವರು "ಮಾನಸಿಕ ಒತ್ತಡ ನಿರ್ವಹಣೆ ಮತ್ತು ಸಂವಹನ ಕುರಿತು" ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ವ್ಯವಸ್ಥಾಪಕರಾದ ಆರ್. ನಾಗರಾಜ್, ಸಮೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವ್ಯವಸ್ಥಾಪಕರಾದ ರಾಜೇಶ್, ಪ್ರತಿನಿಧಿಗಳು ಹಾಜರಿದ್ದರು.

# ಶ್ರೀ ಏಕಲವ್ಯ ಅರ್ಬನ್ ಕೋ-ಆಫ್ ಕ್ರೆಡಿಟ್ ಸೊಸಾಯಿಟಿ ಲಿ., ರಾಣೇಬೆನ್ನೂರು



"ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬಂತೆ ಬೀಜೋತ್ಪಾದನಾ ನಗರಿ ವಾಣಿಜ್ಯ ಕ್ಷೇತ್ರದಲ್ಲಿ ತನ್ನದೇ ಆದ ಸಾಧನೆ ಮಾಡಿರುವ ರಾಣೇಬೆನ್ನೂರಿನ ಶ್ರೀ ಏಕಲವ್ಯ ಅರ್ಬನ್ ಕೋ ಆಪ್. ಕ್ರೆಡಿಟ್ ಸೊಸೈಟಿಯು ಪ್ರಗತಿ ಪಥದಲ್ಲಿ ಸಾಗಿದೆ.

ದಿನಾಂಕ : 20-08-2001ರಂದು ರೂ.3,75,500/-ಗಳ ಶೇರು ಬಂಡವಾಳ ದೊಂದಿಗೆ ಕಾರ್ಯಾರಂಭ ಮಾಡಿದ ಈ ಸಂಘವು ಕಳೆದ 25 ವರ್ಷದಲ್ಲಿ ಹೆಮ್ಮೆಯ ಶಿಖರವನ್ನು ಮುಡಿಗೇರಿಸಿಕೊಂಡಿದೆ. ಅಂದಿನ ಸಹಕಾರಿ ಧುರೀಣರು, ನಿವೃತ್ತ ನೌಕರರು, ವ್ಯಾಪಾರಸ್ಥರು ಹೀಗೆ ಅನೇಕ ಸಮಾನ ಮನಸ್ಕರೆಲ್ಲರೂ ಸೇರಿ ಸಂಘವನ್ನು ಆರಂಭಿಸಿದರು. ಇಂದು ರಾಣೇಬೆನ್ನೂರಿನ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳೊಂದಿಗೆ ಸಮನಾಗಿ ಆರೋಗ್ಯಕರ ಸ್ಪರ್ಧೆಯಿಂದ ಸಂಸ್ಥೆಯು 25 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ. ದಿನಾಂಕ : 04-08-2025ರಂದು ರಜತಮಹೋತ್ಸವ ಆಚರಿಸಿಕೊಂಡಿದೆ.

ಇದೇ ಸಂಭ್ರಮದಲ್ಲಿ ಸಂಘವು ಸನ್ 2020-21ನೇ ಸಾಲಿನಲ್ಲಿ ಖರೀದಿಸಲಾದ 80*36 ಅಳತೆಯ ಸ್ವಂತ ನಿವೇಶದಲ್ಲಿ ರೂ.90, 0000/- ಮೌಲ್ಯದ ಕಟ್ಟಡದಲ್ಲಿ ಸಂಘದ ಕಛೇರಿ ಹಾಗೂ ವಾಣಿಜ್ಯ ಮಳಿಗೆಗಳನ್ನು ಸಂಸ್ಥೆಯ ಸಂಸ್ಥಾಪಕರು ಹಾಗೂ ಗಣ್ಯ ಮಹನೀಯರಿಂದ ಉದ್ಘಾಟನೆ ನೆರವೇರಿಸಲಾಯಿತು.

ಸಂಘವು 25 ವರ್ಷಗಳಿಂದ ಲಾಭದಲ್ಲಿ ಕಾರ್ಯ ನಿರ್ವಹಿಸುತ್ತಾ ಬಂದಿದ್ದು ದಿನಾಂಕ : 31-03-2025ಕ್ಕೆ ಇರುವಂತೆ ರೂ, 84,66,100/- ಶೇರು ಬಂಡವಾಳ ಮತ್ತು ರೂ.6,93,80,274/- ದುಡಿಯುವ ಬಂಡವಾಳವನ್ನು ಹೊಂದಿರುತ್ತದೆ.

2024-25ನೇ ಸಾಲಿನ ನಿವ್ವಳ ಲಾಭ ರೂ, 25,99,812/- ಹೊಂದಿದ್ದು ಸದಸ್ಯರಿಗೆ ಕಳೆದ



## ರಜತ ಮಹೋತ್ಸವದ ಸಮಾರಂಭ



## ಸಂಘದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ



25 ವರ್ಷಗಳಿಂದ 12% ರಷ್ಟು ಲಾಭಾಂಶ ವಿತರಿಸಲಾಗುತ್ತಿದೆ. ಪ್ರತಿ ವರ್ಷ ಸದಸ್ಯ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರಶಂಸನಾ ಪತ್ರ ನೀಡಿ ಪ್ರೋತ್ಸಾಹಿಸುತ್ತಿದೆ.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ ಬೆಂಗಳೂರು ಇದರಿಂದ ಇ-ಸ್ಟಾಂಪ್ ಅಧಿಕೃತ ವಿತರಣಾ ಕೇಂದ್ರ ಹೊಂದುವ ಮೂಲಕ ಸಂಘದ ಬಡ್ಡಿಯೇತರ ಆದಾಯ ಹೆಚ್ಚಿದೆ. ಮಹಾಮಂಡಳವು 2015-16ನೇ ಸಾಲಿನಲ್ಲಿ ಇ-ಸ್ಟಾಂಪ್ ವ್ಯವಹಾರ ಮಾಡುವಲ್ಲಿ ಹಾವೇರಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಅಭಿನಂದನಾ ಪ್ರಶಂಶನಾ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಿದೆ. 2016-17ನೇ ಸಾಲಿನಲ್ಲಿ ಮುದ್ರಾಂಕ ಶುಲ್ಕ ಹಾಗೂ ಅತಿ ಹೆಚ್ಚು ಇ-ಸ್ಟಾಂಪ್ ಪ್ರತಿ ಮುದ್ರಿಸಿದ ಪ್ರಥಮ ಸಂಘ ಎಂದು ಜಿಲ್ಲಾ ಮಟ್ಟದ ಪುರಸ್ಕಾರ ಲಬಿಸಿದೆ. 2018-19ನೇ ಸಾಲಿನಲ್ಲಿ ಅತಿ ಹೆಚ್ಚು ಇ-ಸ್ಟಾಂಪ್ ವಿತರಿಸಿದ ಸಂಘ ಎಂದು ಜಿಲ್ಲಾ ಮಟ್ಟದ ಪುರಸ್ಕಾರ ನೀಡಿ ಗೌರವಿಸಿದೆ. ಅದೇ ರೀತಿಯಾಗಿ 2023-24ನೇ ಸಾಲಿನಲ್ಲಿ ಅತಿ ಹೆಚ್ಚು ಇ-ಸ್ಟಾಂಪ್ ವಿತರಿಸಿದ ಸಂಘ ಎಂದು ಪ್ರಶಂಸನಾ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಿದೆ.

### ಸದಸ್ಯರಿಗೆ ಸಾಲ ಸೌಲಭ್ಯ

1) ಆಸ್ತಿ ವತ್ತಿ ಸಾಲ, 2) ಜಾಮಿನು ಸಾಲ, 3) ವಾಹನ ಸಾಲ, 4) ಬಂಗಾರ ಆಭರಣ ಸಾಲ, 5) ಲಾಕರ್ ಸೌಲಭ್ಯ, 6) ಇ-ಸ್ಟಾಂಪಿಂಗ್ (ಬಾಂಡ್ ಪೇಪರ್ ವಿತರಣೆ) 7) ಎಸ್ಎಮ್ಎಸ್ ಸರ್ವಿಸ್

ಸಂಘದ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಏಳಿಗೆಗೆ ಆಡಳಿತಮಂಡಳಿಯ ಸಕರಾತ್ಮಕ ಮಾರ್ಗದರ್ಶನ, ನಿಸ್ವಾರ್ಥ ಸೇವೆ, ಸರ್ವ ಸದಸ್ಯರ ಗ್ರಾಹಕರ ಹಿತೈಷಿಗಳ ಸಹಕಾರ ಹಾಗೂ ಸಿಬ್ಬಂದಿಗಳ ಸಮರ್ಪಕವಾದ ಸೇವೆಗಳಿಂದ 25 ವಸಂತಗಳನ್ನು ಪೂರೈಸಿ ಸಂಘದ ಸದಸ್ಯರಿಗೆ ಉತ್ತಮವಾದ ಸೇವೆನ್ನು ನೀಡುತ್ತಾ ಲಾಭದಲ್ಲಿ ಕಾರ್ಯನಿರ್ವಹಿಸುತ್ತಿದೆ.

ದಿನಾಂಕ : 04-08-2025ರಂದು ನಡೆದ ಸಂಘದ ಕಟ್ಟಡ ಉದ್ಘಾಟನೆಯನ್ನು ಸಂಸ್ಥೆಯ ಸಂಸ್ಥಾಪಕರು ಹಾಗೂ ರಜತ ಮಹೋತ್ಸವದ ಉದ್ಘಾಟನೆಯನ್ನು ಪರಮ ಪೂಜ್ಯ ಡಾ:ಪ್ರಸನ್ನಾನಂದ ಪುರಿ ಮಹಾಸ್ವಾಮಿಗಳು ರಾಜನಹಳ್ಳಿ ಗುರು ಪೀಠ ರಾಜನಹಳ್ಳಿ ಇವರ ದಿವ್ಯ ಸಾನಿಧ್ಯ ವಹಿಸಿದ್ದರು. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಉಪಾಧ್ಯಕ್ಷರಾದ ಧರೇಪ್ಪ ಮಹದೇವ ಅಲಗೂರ, ನಿರ್ದೇಶಕರುಗಳಾದ ಡಾ: ಸಂಜಯ ಹೊಸಮಠ ಹಾಗೂ ತಮ್ಮಣ್ಣ ಬಾ ಕೆಂಚರಡ್ಡಿ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಹಾಗೂ ಆಡಳಿತಮಂಡಳಿಯ ಸದಸ್ಯರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ನಾಡಿನಾದ್ಯಂತ ಸಡಗರ ಸಂಭ್ರಮದಿಂದ ಸುಗ್ಗಿಹಬ್ಬ ಸಂಕ್ರಾಂತಿ

ಹಿಂದೂಗಳ ಹಬ್ಬಗಳಲ್ಲಿ ಮಕರ ಸಂಕ್ರಾಂತಿಗೆ ವಿಶೇಷ ಸ್ಥಾನವಿದೆ. ಇದು ವರ್ಷದ ಆರಂಭದ ಹಬ್ಬ ಎಂಬ ಹೆಗ್ಗಳಿಕೆ ಗಳಿಸಿದೆ. ಅನ್ನ ನೀಡುವ ಭೂಮಿತಾಯಿ ಹಾಗೂ ಪ್ರಕೃತಿಯನ್ನು ಪೂಜಿಸುವುದು ಮಕರ ಸಂಕ್ರಾಂತಿ ಹಬ್ಬದ ವಿಶೇಷವಾಗಿದೆ.

ಸಂಕ್ರಾಂತಿಯ ದಿನದಂದು ಸೂರ್ಯ ತನ್ನ ಪಥ ಬದಲಾಯಿಸುವುದು ಒಂದು ವಿಶೇಷವಾಗಿದೆ.

ಮಕರ ಸಂಕ್ರಾಂತಿಯು ಸುಗ್ಗಿಯ ಹಬ್ಬವಾಗಿದ್ದು, ಇದನ್ನು ದೇಶಾದ್ಯಂತ ವಿವಿಧ ಹೆಸರುಗಳೊಂದಿಗೆ ಆಚರಿಸಲಾಗುತ್ತದೆ. ಪ್ರತಿಯೊಂದು ರಾಜ್ಯವು ತಮ್ಮ ಸಂಸ್ಕೃತಿ ಮತ್ತು ಸಂಪ್ರದಾಯದಂತೆ ಹಬ್ಬವನ್ನು ಆಚರಿಸುತ್ತಾರೆ. ಸುಗ್ಗಿಯ ಕಾಲವನ್ನು ಭಾರತದಲ್ಲಿ ಸಂಕ್ರಾಂತಿ, ಲೋಹ್ರಿ, ಪೊಂಗಲ್ ಮತ್ತು ಬಿಹು ಮುಂತಾದ ವಿವಿಧ ಹೆಸರುಗಳಿಂದ ಆಚರಿಸಲಾಗುತ್ತದೆ. ಕರ್ನಾಟಕದಲ್ಲಿಯೂ ಸಂಕ್ರಾಂತಿಯನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಭಾರತದ ಬಹುಪಾಲು ರಾಜ್ಯಗಳು ಸಂಕ್ರಾಂತಿಯನ್ನು ಆಚರಿಸುತ್ತವೆ.



ಮಕರ ಸಂಕ್ರಾಂತಿಯು ಸೂರ್ಯನೊಂದಿಗೆ ಸಂಬಂಧವನ್ನು ಹೊಂದಿದ ಹಬ್ಬವಾಗಿದೆ. ಈ ಹಬ್ಬವನ್ನು ಸೌರ ಚಕ್ರಗಳ ಆಧಾರದ ಮೇಲೆ ಆಚರಿಸಲಾಗುತ್ತದೆ. ಸೂರ್ಯನು 6 ತಿಂಗಳ ಕಾಲ ಉತ್ತರದ ಕಡೆಗೆ ಚಲಿಸುವ ಸಮಯ ಇದು. ಇದನ್ನೇ ಸೂರ್ಯನ ಉತ್ತರಾಯಣ ಸಂಚಾರ ಎಂದು ಕರೆಯಲಾಗುತ್ತದೆ. ಹಿಂದೂ ಕ್ಯಾಲೆಂಡರ್ ಪ್ರಕಾರ, ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸಿದಾಗ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದ ಕುರಿತು ಒಂದಿಷ್ಟು ಮಾಹಿತಿ ಹೀಗಿದೆ ನೋಡಿ.

**ಮಕರ ಸಂಕ್ರಾಂತಿ ಇತಿಹಾಸ :** ಸಂಕ್ರಾಂತಿಯನ್ನು ದೇವತೆ ಎಂದು ಪರಿಗಣಿಸಲಾಗುತ್ತದೆ. ದಂತಕಥೆಯ ಪ್ರಕಾರ, ಸಂಕ್ರಾಂತಿಯು ಶಂಕರಾಸುರ ಎಂಬ ರಾಕ್ಷಸನನ್ನು ಕೊಂದಿತು. ಮಕರ ಸಂಕ್ರಾಂತಿಯ ಮುಂದಿನ ದಿನವನ್ನು ಕರಿದಿನ ಅಥವಾ ಕಿಂಕ್ರಾಂತ ಎಂದು ಕರೆಯಲಾಗುತ್ತದೆ. ಸಂಕ್ರಾಂತಿ ದೇವತೆಯನ್ನು ಹೊರತುಪಡಿಸಿ, ಮಕರ ಸಂಕ್ರಾಂತಿಯನ್ನು ಭಾರತದ ಎರಡು ಮಹಾಕಾವ್ಯ ಗ್ರಂಥಗಳಾದ ಪುರಾಣಗಳು ಮತ್ತು ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ. ಕೆಲವು ನಂಬಿಕೆಗಳ ಪ್ರಕಾರ, ವೈದಿಕ ಋಷಿ ವಿಶ್ವಾಮಿತ್ರನು ಈ ಹಬ್ಬವನ್ನು ಆಚರಿಸಲು ಪ್ರಾರಂಭಿಸಿದನು ಮತ್ತು ಮಹಾಭಾರತದಲ್ಲಿ ಪಾಂಡವರು ತಮ್ಮ ವನವಾಸದ ಸಮಯದಲ್ಲಿ ಈ ಹಬ್ಬವನ್ನು ಆಚರಿಸಿದರು ಎನ್ನುವ ನಂಬಿಕೆಯಿದೆ.

**ಮಕರ ಸಂಕ್ರಾಂತಿ ಮಹತ್ವ :** ಮಕರ ಸಂಕ್ರಾಂತಿಯು ಸೂರ್ಯ ದೇವನಿಗೆ ಮೀಸಲಾಗಿದೆ. ಈ ಹಬ್ಬವು ಹಿಂದೂಗಳಿಗೆ ಉತ್ತರಾಯಣ ಕಾಲ ಎಂದು ಕರೆಯಲ್ಪಡುವ ಆರು ತಿಂಗಳ ಮಂಗಳಕರ ಅವಧಿಯ ಆರಂಭವನ್ನು ಸಂಕೇತಿಸುತ್ತದೆ. ಇದು ಆಧ್ಯಾತ್ಮಿಕ ಆಚರಣೆಗಳಿಗೆ ಮಹತ್ವದ ಅವಧಿ ಎಂದು ಪರಿಗಣಿಸಲಾಗಿದೆ. ಮಕರ ಸಂಕ್ರಾಂತಿಯ ಸಂದರ್ಭದಲ್ಲಿ, ಗಂಗಾ ಮತ್ತು ಜಮುನಾ ಸಂಗಮದಲ್ಲಿ ಲಕ್ಷಾಂತರ ಜನರು ಪವಿತ್ರ ಸ್ನಾನ ಮಾಡುತ್ತಾರೆ. ಈ ಪವಿತ್ರ ಸ್ನಾನವು ಜನ್ಮ ಜನ್ಮಗಳ ಪಾಪಗಳನ್ನು ಕಳೆಯುತ್ತದೆ ಎನ್ನುವ ನಂಬಿಕೆಯಿದೆ. ಜನರು ತಮ್ಮ ಪ್ರಾರ್ಥನೆಗಳನ್ನು ಸೂರ್ಯ ದೇವರಿಗೆ ಸಲ್ಲಿಸುತ್ತಾರೆ.

ಮಕರ ಸಂಕ್ರಾಂತಿ ಆಚರಿಸುವ ವಿಧಾನ : ಮಕರ ಸಂಕ್ರಾಂತಿ ದಿನದಂದು ಮುಂಜಾನೆ ಬೇಗ ಎದ್ದು ಪವಿತ್ರ ನದಿಗಳಲ್ಲಿ ಸ್ನಾನ ಮಾಡಬೇಕು. ಒಂದು ವೇಳೆ ಪವಿತ್ರ ನದಿ ಸ್ನಾನ ಮಾಡಲು ಸಾಧ್ಯವಾಗದೇ ಇದ್ದರೆ ಮನೆಯಲ್ಲೇ ಸ್ನಾನ ಮಾಡುವ ನೀರಿಗೆ ಗೋಮೂತ್ರ ಅಥವಾ ಗಂಗಾಜಲ ಬೆರೆಸಿ ಸ್ನಾನ ಮಾಡಬಹುದು. ಮನೆಯ ಮಹಿಳೆಯರು ಶುದ್ಧರಾದ ಬಳಿಕ ಮನೆಯ ಅಂಗಳದಲ್ಲಿ ರಂಗೋಲಿಯಲ್ಲಿ ಹಾಕಬೇಕು. ನಂತರ ಸೂರ್ಯ ದೇವನಿಗೆ ಅರ್ಘ್ಯವನ್ನು ಅರ್ಪಿಸಿ ಪೂಜೆಯನ್ನು ಮಾಡಬೇಕು. ಈ ದಿನ ಶನಿ ದೇವನನ್ನು ಪೂಜಿಸುವುದು ಕೂಡ ಮಂಗಳಕರವಾಗಿರುತ್ತದೆ. ಈ ದಿನ ಪೂಜೆಯ ನಂತರ ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ದಾನವನ್ನು ಮಾಡಬೇಕು.

ಮಕರ ಸಂಕ್ರಾಂತಿ ದಿನ ಎಳ್ಳು – ಬೆಲ್ಲ : ಮಕರ ಸಂಕ್ರಾಂತಿಯ ದಿನದಂದು ಎಳ್ಳು ಮತ್ತು ಬೆಲ್ಲಕ್ಕೆ ಹೆಚ್ಚಿನ ಮಹತ್ವವಿದೆ. ಆದುದ–ರಿಂದ ಇದನ್ನು ತಿಲ ಸಂಕ್ರಾಂತಿ ಎಂದೂ ಕರೆಯುತ್ತಾರೆ. ಮಕರ ಸಂಕ್ರಾಂತಿಯ ದಿನ ಬೆಲ್ಲ, ಎಳ್ಳು ತಿನ್ನುವುದಲ್ಲದೇ, ನೀರಿನಲ್ಲಿ ಎಳ್ಳು ಸೇರಿಸಿ ಸ್ನಾನ ಮಾಡುತ್ತಾರೆ. ಈ ದಿನ ಎಳ್ಳು – ಬೆಲ್ಲವನ್ನು ಪರಸ್ಪರ ಹಂಚುವ ಮೂಲಕ ಹಬ್ಬದ ಖುಷಿಯನ್ನು ಸಂಭ್ರಮಿಸಲಾಗುತ್ತದೆ.

**ಮಕರ ಸಂಕ್ರಾಂತಿಯ ಸಮಯದಲ್ಲಿ ಗಾಳಿಪಟದ ಮಹತ್ವ :** ಮಕರ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಕಂಡುಬರುವ ಅತ್ಯಂತ ರೋಮಾಂಚಕ ದೃಶ್ಯಗಳಲ್ಲಿ ಒಂದು ಚಳಿಗಾಲದ ಬೆಳಗಿನ ಆಕಾಶದಲ್ಲಿ ಮೇಲೇರುತ್ತಿರುವ ವರ್ಣರಂಜಿತ ಗಾಳಿಪಟಗಳ ದೃಶ್ಯವಾಗಿದೆ.





ಗಾಳಿಪಟ ಹಾರಿಸುವ ಸ್ಪರ್ಧೆಗಳನ್ನೂ ವಿವಿಧೆಡೆ ಆಯೋಜಿಸಲಾಗುತ್ತದೆ. ಅನೇಕರು ಈ ಆನಂದದಾಯಕ ಚಟುವಟಿಕೆಯನ್ನು ದೇವರುಗಳಿಗೆ ಕೃತಜ್ಞತೆ ಸಲ್ಲಿಸುವ ಒಂದು ರೂಪವೆಂದು ಪರಿಗಣಿಸುತ್ತಾರೆ.

ವಿವಿಧ ಪ್ರದೇಶಗಳಿಗೆ ತಕ್ಕಂತೆ ಮಕರ ಸಂಕ್ರಾಂತಿ ಆಚರಣೆಯ ವಿಧಾನವು ಭಿನ್ನ ಭಿನ್ನವಾಗಿರುತ್ತದೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋದಂತೆ ಮಕರ ಸಂಕ್ರಾಂತಿ ಆಚರಣೆಯ ವಿಧಾನ, ಅದನ್ನು ಕರೆಯುವ ಹೆಸರು ಕೂಡ ಬದಲಾಗುವುದು. ಮಕರ ಸಂಕ್ರಾಂತಿಯಂದು ಎಳ್ಳು – ಬೆಲ್ಲವನ್ನು ಹಂಚುವ ಮೂಲಕ ಸಂತೋಷವನ್ನು ಹಂಚಿಕೊಂಡು ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ.

ಸಂಕ್ರಾಂತಿಯ ದಿನದ ಅಡುಗೆ ಕೂಡ ವಿಶೇಷವೇ. ಅವರೆಕಾಯಿ, ಹಸಿ ಕಡಲೆಕಾಯಿ ಮತ್ತು ಗೆಣಸನ್ನು ಜೊತೆ ಸೇರಿಸಿ ಬೇಯಿಸಲಾಗುತ್ತದೆ. ತುಪ್ಪ, ಹಾಲು, ಅಕ್ಕಿ ಹಾಗೂ ಬೆಲ್ಲದಿಂದ ರುಚಿ ರುಚಿಯಾದ ಪೊಂಗಲ್ ತಯಾರಿಸಲಾಗುತ್ತದೆ. ದನಕರುಗಳಿಗೆ ಮೊದಲು ತಿನ್ನಿಸಿದ ನಂತರವೇ ಮನೆಯವರಿಗೆ ತಿನ್ನಲು ಸಿಗುತ್ತದೆ.

ಸಂಕ್ರಾಂತಿಯ ಸಂಭ್ರಮ ಒಂದೇ ದಿನಕ್ಕೆ ಮುಗಿಯುವುದಿಲ್ಲ. ಹಬ್ಬದ ನಂತರ ಹದಿನೈದು ದಿನಗಳ ಕಾಲ ಒಂದಲ್ಲ ಒಂದು ಊರಿನಲ್ಲಿ 'ದನ ಓಡಿಸುವ' ಆಚರಣೆ ಇರುತ್ತದೆ. ಊರಿನ ಪ್ರಮುಖ ಬೀದಿಯಲ್ಲಿ ದನಗಳನ್ನು ಓಡಿಸಲಾಗುತ್ತದೆ.

ಸರದಿಯ ಪ್ರಕಾರ ದನಗಳನ್ನು ಬಿಡಲಾಗುತ್ತದೆ. ಇಕ್ಕಟ್ಟಾದ, ಅಂಕುಡೊಂಕಿನ ಬೀದಿಯ ಕೊನೆಗೆ ನುಗ್ಗಿಬರುವ ದನವನ್ನು ಹಿಡಿಯಲು ಕಟ್ಟು ಮಸ್ತಾದ ಯುವಕರು ಕಾದು ನಿಂತಿರುತ್ತಾರೆ. ತಮಟೆ ಸದ್ದಿಗೆ, ಜನರ ಕೇಕೆ, ಗದ್ದಲಕ್ಕೆ ಬೆದರಿ ದಿಕ್ಕಾಪಾಲಾಗಿ ಓಡಿ ಬರುವ ದನದ ಕೊರಳಿಗೆ ಜೋತು ಬಿದ್ದು, ಮೂಗುದಾರ ಹಿಡಿದು ನಿಲ್ಲಿಸುವ ಕ್ಷಣಗಳನ್ನು ನೋಡುವುದೇ ಒಂದು ರೋಮಾಂಚನ.

ಉತ್ತರ ಕರ್ನಾಟಕದ ಸಂಕ್ರಾಂತಿಯ ಸಂಭ್ರಮ ವಿಶಿಷ್ಟವಾದದ್ದು. ಹಬ್ಬದ ದಿನ ಮನೆ ಸ್ವಚ್ಛ ಮಾಡಿ, ಬಾಗಿಲಿಗೆ ಜೋಳದ ದಂಟು ಮತ್ತು ಮಾವಿನ ಎಲೆಗಳ ತೋರಣ ಕಟ್ಟಲಾಗುತ್ತದೆ. ಮನೆ ಮುಂದೆ ರಂಗೋಲಿ ಹಾಕಿ, ಅದರ ನಡುವೆ ಸಗಣಿಯ ಉಂಡೆ ಇಟ್ಟು ಹೂವಿನಿಂದ ಸಿಂಗರಿಸುತ್ತಾರೆ. ಸಿಹಿ ಅಡುಗೆ, ಎಳ್ಳು ರೊಟ್ಟಿ, ಪುಂಡಿ ಪಲ್ಲೆ ಅಡುಗೆ ಮಾಡುತ್ತಾರೆ.

ದನಕರುಗಳಿಗೆ ಮೈತೊಳೆದು ಸಿಂಗರಿಸುತ್ತಾರೆ. ಅವುಗಳೊಟ್ಟಿಗೆ ಹೊಲಕ್ಕೆ ಹೋಗಿ, ಹಿಂಗಾರಿನ ಫಸಲಿಗೆ ಪೂಜೆ ಮಾಡುತ್ತಾರೆ. ಹೊಲದಲ್ಲೇ ಊಟ ಮಾಡುತ್ತಾರೆ. ಸಂಜೆ ಮನೆಗೆ ಬರುವಾಗ ಹೊಲದಿಂದ ಎಳ್ಳಿನ ಕಡ್ಡಿಗಳ ತರುತ್ತಾರೆ. ಅವನ್ನು ಮನೆಯ ಮುಂದೆ ಹರಡಿ, ಬೆಂಕಿ ಹಾಕುತ್ತಾರೆ. ದನಕರುಗಳನ್ನು ಬೆಂಕಿಯಲ್ಲಿ ಹಾಯಿಸಿ ಮನೆಗೆ ಬರಮಾಡಿಕೊಳ್ಳುತ್ತಾರೆ.

ಸಂಕ್ರಾಂತಿ ಆಚರಣೆ ಸಮಯದಲ್ಲಿ ಕರ್ನಾಟಕದಲ್ಲಿ ಎತ್ತುಗಳಿಗೆ ಕಿಚ್ಚುಹಾಯಿಸಿದರೆ. ತಮಿಳುನಾಡಿನಲ್ಲಿ ಜಲ್ಲಿಕಟ್ಟು ಹೆಸರಿನಲ್ಲಿ ಹೋರಿಗಳನ್ನು ಓಡಿಸುವ ಸ್ಪರ್ಧೆ ನಡೆಸಲಾಗುತ್ತದೆ. ಇದು ಅತ್ಯಂತ ಅಪಾಯಕಾರಿ ಸ್ಪರ್ಧೆಯಾಗಿದ್ದು ಸ್ಪರ್ಧೆಯಲ್ಲಿ ಭಾಗವಹಿಸಿದ ಯುವಕರು ಪ್ರಾಣ ಕಳೆದುಕೊಂಡ ಘಟನೆಗಳು ನಡೆದಿವೆ.

ತಮಿಳುನಾಡಿನಲ್ಲಿ ಪೊಂಗಲ್ ಹೆಸರಿನಲ್ಲಿ ಸಂಕ್ರಾಂತಿ ಹಬ್ಬವನ್ನು ನಾಲ್ಕು ದಿನಗಳ ಕಾಲ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ.

ಸಂಕ್ರಾಂತಿ ಆಚರಣೆ ಅಂಗವಾಗಿ ಅಯ್ಯಪ್ಪ ಸ್ವಾಮಿಯ ದರ್ಶನಕ್ಕೆ ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ಸಮಯದಲ್ಲಿ ಭಕ್ತರಿಗೆ ಮಕರ ಜ್ಯೋತಿಯ ದರ್ಶನವು ಆಗುತ್ತದೆ. ಅದೇ ರೀತಿ ತಿರುಪತಿ ಸಹಿತ ಧಾರ್ಮಿಕ ತಾಣಗಳಿಗೆ ಲಕ್ಷಾಂತರ ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಬೆಂಗಳೂರಿನ ಕೆಂಪೇಗೌಡ ನಗರದಲ್ಲಿರುವ ಗವಿಗಂಗಾಧರ ದೇವಸ್ಥಾನದಲ್ಲಿ ಸಂಕ್ರಾಂತಿಯ ದಿನ ಗವಿಗಂಗಾಧರ ಮೂರ್ತಿಯ ಮೇಲೆ ಬೀಳುವ ಸೂರ್ಯನ ಕಿರಣ ನೋಡಲು ಲಕ್ಷಾಂತರ ಭಕ್ತರು ಆಗಮಿಸುತ್ತಾರೆ.

**– ಸವಿತಾ ನಾಯ್ಕ್,**
**ಬೆಂಗಳೂರು**

# 77ನೇ ಗಣರಾಜ್ಯೋತ್ಸವದಲ್ಲಿ ವಂದೇ ಮಾತರಂ ಗೀತೆಯ ಸ್ಮರಣೆ



ರಾಜಪ್ರಭುತ್ವವು ಅಂತ್ಯವಾಗಿ ಭಾರತದಲ್ಲಿ ಸಂವಿಧಾನವನ್ನು ಸ್ಥಾಪಿಸಿದ ದಿನವೇ ಜನವರಿ 26. ದೇಶದ ಸಂವಿಧಾನ ಅಸ್ತಿತ್ವಕ್ಕೆ ಬಂದ ದಿನವಾಗಿದ್ದು ಭಾರತೀಯರಿಗೆ ಹೆಮ್ಮೆಯ ದಿನವಾಗಿದೆ. 26 ಜನವರಿ 1950 ರಂದು ಸಂವಿಧಾನವನ್ನು ಸ್ಥಾಪನೆ ಮಾಡಲಾಗಿದ್ದು, ಇದರ ಗೌರವಾರ್ಥವಾಗಿ ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ.

77ನೇ ಗಣರಾಜ್ಯೋತ್ಸವ ಭಾರತ ಮಾತ್ರವಲ್ಲದೆ ವಿದೇಶದಲ್ಲೂ ಸಡಗರ ಸಂಭ್ರಮದಿಂದ ನಡೆಸುವ ಆಚರಣೆಯಾಗಿದೆ.

**ಗಣರಾಜ್ಯೋತ್ಸವ ದಿನದ ಇತಿಹಾಸ :** 1950ರ ಜನವರಿ 26ರಂದು ಸಂವಿಧಾನವನ್ನು ಅಂಗೀಕರಿಸುವ ಮೂಲಕ ಗಣರಾಜ್ಯ ಎಂದು ಘೋಷಿಸಲ್ಪಟ್ಟ ದಿನವಾಗಿದೆ. ದೇಶದ ಮೊದಲ ಸಂವಿಧಾನ ಸಭೆ 1946ರ ಡಿಸೆಂಬರ್ 9ರಂದು ತನ್ನ ಮೊದಲ ಅಧಿವೇಶನ ನಡೆಸಿತ್ತು. ಕೊನೆಯ ಅಧಿವೇಶನ 1949ರ ನವೆಂಬರ್ 26ರಂದು ನಡೆದಿತ್ತು. ಡಾ.ಬಿ.ಆರ್. ಅಂಬೇಡ್ಕರ್ ನೇತೃತ್ವದ ಸಂವಿಧಾನ ರಚನಾ ಸಮಿತಿ ರಚಿಸಿದ ಸಂವಿಧಾನವನ್ನು ಒಂದು ವರ್ಷದ ಬಳಿಕ ಅಂಗೀಕರಿಸಲಾಯಿತು. ಹೀಗಾಗಿ 26 ಜನವರಿ 1950 ರಂದು ಸಂವಿಧಾನ ಜಾರಿಗೆ ಬಂದಿತು. ಅಂದಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಭಾರತದ ಬಾವುಟವನ್ನು ಹಾರಿಸಿ ಸಂವಿಧಾನ ಜಾರಿಗೆ ಬಂದ ದಿನವನ್ನು ಘೋಷಿಸಿದ್ದರು. ಅಂದಿನಿಂದ ಪ್ರತಿ ವರ್ಷ ಜನವರಿ 26 ಗಣರಾಜ್ಯೋತ್ಸವ ದಿನವನ್ನು ಹಬ್ಬದಂತೆ ದೇಶದಾದಂತ್ಯ ಆಚರಿಸಲಾಗುತ್ತಿದೆ.

**77ನೇ ಗಣರಾಜ್ಯೋತ್ಸವದ ಥೀಮ್ :** ಡಿಸೆಂಬರ್‌ನಲ್ಲಿ ನಡೆದ ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲೆರಡು ದಿನ ವಂದೇ ಮಾತರಂ ಗೀತೆಯ ಬಗ್ಗೆಯ ಚರ್ಚೆ ನಡೆದಿದ್ದನ್ನು ಇಡೀ ದೇಶವೇ ವೀಕ್ಷಿಸಿದೆ. ಇದರ ನಡುವೆಯೇ, ಕೇಂದ್ರ ಸರ್ಕಾರ ಈ ಬಾರಿಯ 77ನೇ ಗಣರಾಜ್ಯೋತ್ಸವವನ್ನು 'ವಂದೇ ಮಾತರಂ' ಗೀತೆಯ ಸ್ಮರಣೆಯೊಂದಿಗೆ ಆಚರಿಸುತ್ತಿರುವುದು ಇನ್ನಷ್ಟು ಅರ್ಥಪೂರ್ಣವಾಗಿದೆ.


ಈ ವಿಶೇಷ ಆಚರಣೆಗೆ ಯುರೋಪಿಯನ್ ಯೂನಿಯನ್ (EU) ನ ಉನ್ನತ ನಾಯಕರಾದ ಉರ್ಸುಲಾ ವಾನ್ ಡೆರ್ ಲೇಯೆನ್ ಮತ್ತು ಆಂಟೋನಿಯೊ ಕೋಸ್ಟಾ ಅವರನ್ನು ಮುಖ್ಯ ಅತಿಥಿಗಳಾಗಿರುವುದು ಕಾರ್ಯಕ್ರಮದ ಮಹತ್ವ ಹೆಚ್ಚಿಸಿದೆ.

ಗಣರಾಜ್ಯೋತ್ಸವದ ಅಂಗವಾಗಿ ಜ. 26 ರಂದು ನಡೆಯಲಿರುವ ಪರೇಡ್‌ನಲ್ಲಿ 'ವಂದೇ ಮಾತರಂ' ಗೀತೆಯ ಸ್ಫೂರ್ತಿಯನ್ನು ಎತ್ತಿಹಿಡಿಯುವ ಕಾರ್ಯಕ್ರಮಗಳು ಆಕರ್ಷಣೆ ವಿಶೇಷ. ಈ ಸಂದರ್ಭದಲ್ಲೇ, ಬಹುನಿರೀಕ್ಷಿತ ಇ.ಯು–ಭಾರತ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್.ಟಿ.ಎ) ಅಂತಿಮಗೊಳಿಸಲಾಗಿದ್ದು ಇ.ಯು – ಭಾರತ ಶೃಂಗಸಭೆಯೂ ನಡೆದಿರುವುದು ವಿಶೇಷ.

ಈ ಬಾರಿ ಗಣರಾಜ್ಯೋತ್ಸವದ ಆಚರಣೆಯು 'ವಂದೇ ಮಾತರಂ' ಗೀತೆಯ 150 ವರ್ಷಗಳ ಇತಿಹಾಸವನ್ನು ಸಾರಲಿದೆ. 1875ರಲ್ಲಿ ಪ್ರಕಟವಾದ 'ವಂದೇ ಮಾತರಂ' ಗೀತೆಯ ಮೊದಲ ಎರಡು ಪದ್ಯಗಳು ಭಾರತದ ರಾಷ್ಟ್ರಗೀತೆಯಾಗಿ ಬಳಕೆಯಲ್ಲಿದೆ. ಈ ಐತಿಹಾಸಿಕ ಘಟನೆಯನ್ನು ಸ್ಮರಿಸುವ ನಿಟ್ಟಿನಲ್ಲಿ, ರಕ್ಷಣಾ ಸಚಿವಾಲಯವು ಜ. 26ರಂದು ನಡೆಯುವ 77ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ 'ವಂದೇ ಮಾತರಂ' ಥೀಮ್ ಅಳವಡಿಸಲು ನಿರ್ದೇಶನ ನೀಡಿದೆ.

ಇದರಲ್ಲಿ ಟಾರ್ಚ್ ಪಥಸಂಚಲನ ಮತ್ತು ವಿಶೇಷ ಫ್ಲೈ–ಪಾಸ್ಟ್ (ವಿಮಾನಗಳ ಹಾರಾಟ ಪ್ರದರ್ಶನ) ಸೇರಿವೆ. ಯುರೋಪಿಯನ್






ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಮತ್ತು ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಕೋಸ್ಟಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತಿ ಕಾರ್ಯಕ್ರಮಕ್ಕೆ ಇನ್ನಷ್ಟು ಮೆರಗು ನೀಡಿದೆ.

ಸಾಮಾನ್ಯವಾಗಿ, ಗಣರಾಜ್ಯೋತ್ಸವಕ್ಕೆ ಒಬ್ಬ ದೇಶದ ನಾಯಕರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸುವುದು ವಾಡಿಕೆ. ಆದರೆ, 2018 ರಲ್ಲಿ 10 ರಾಷ್ಟ್ರಗಳ ಆಸಿಯಾನ್ ನಾಯಕರನ್ನು ಆಹ್ವಾನಿಸಲಾಗಿತ್ತು. 2022ರ ಜನವರಿಯಲ್ಲಿ, ಕೋವಿಡ್–19 ಪ್ರಕರಣಗಳ ಹೆಚ್ಚಳದಿಂದಾಗಿ ಐದು ಮಧ್ಯ ಏಷ್ಯಾ ದೇಶಗಳ ನಾಯಕರನ್ನು ಆಹ್ವಾನಿಸುವ ಯೋಜನೆಯನ್ನು ರದ್ದುಗೊಳಿಸಬೇಕಾಯಿತು. ಈ ಬಾರಿ, ಯುರೋಪಿಯನ್ ಯೂನಿಯನ್ ನಾಯಕರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸುವ ಮೂಲಕ, ಭಾರತವು ಯುರೋಪ್‌ನೊಂದಿಗೆ ತನ್ನ ಸಂಬಂಧವನ್ನು ಮತ್ತಷ್ಟು ಬಲಪಡಿಸಿಕೊಳ್ಳುವ ಗುರಿ ಇಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

**ಗಣರಾಜ್ಯೋತ್ಸವ ಫಲ ಪುಷ್ಪ ಪ್ರದರ್ಶನದಲ್ಲಿ ಪೂರ್ಣಚಂದ್ರ ತೇಜಸ್ವಿ :** ಗಣರಾಜ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಹೆಸರಾಂತ ಲೇಖಕ, ಕಾದಂಬರಿಕಾರ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಪುತ್ರ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬದುಕು–ಬರಹಗಳು 'ತೇಜಸ್ವಿ ವಿಸ್ಮಯ' ಶೀರ್ಷಿಕೆ ಅಡಿಯಲ್ಲಿ ಹೂವಿನಲ್ಲಿ ಅರಳಿದೆ.

ಗಣರಾಜ್ಯೋತ್ಸವ ಅಂಗವಾಗಿ 2026ರ ಜನವರಿ 15ರಿಂದ 26ರವರೆಗಿನ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ.

ಗಾಜಿನ ಮನೆಯಲ್ಲಿ ತೇಜಸ್ವಿ ಅವರ ಪುತ್ಥಳಿ, 'ನಿರುತ್ತರ'ದ ಅವರ ಮನೆ, ನಿಸರ್ಗದ ಮಡಿಲಿನಲ್ಲಿ ಇರುವ ಬೃಹತ್ ಬೆಟ್ಟದ ಮಾದರಿ ನಿರ್ಮಾಣ, ಕೃತಕವಾಗಿ ನಿರ್ಮಿಸುವ ಕಾಡಿನಲ್ಲಿ ತೇಜಸ್ವಿ ಅವರ ಭಾವಚಿತ್ರ. ಇದರ ಜೊತೆಗೆ ಜೇನುಗೂಡು, ಝರಿ, ಕೆರೆ, ತೇಜಸ್ವಿ ಅವರು ಶಿಕಾರಿಗೆ ತೆರಳುವ ಮಾದರಿಗಳನ್ನು ನೋಡಬಹುದು ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಕಾಡು, ಚಿಟ್ಟೆ, ಕೀಟ ಪ್ರಪಂಚ, ಹಕ್ಕಿಗಳು, ಕರ್ವಾಲೊ ಕಾದಂಬರಿಯಲ್ಲಿ ಬರುವ ಕಿವಿ ಎಂಬ ನಾಯಿ, ಕೃಷ್ಣೇಗೌಡರ ಆನೆ, ತೇಜಸ್ವಿ ಅವರ ಸ್ಕೂಟರ್, ಜೀಪು ಸೇರಿದಂತೆ ಅವರ ಜೀವನದ ಪ್ರಮುಖ ಘಟನೆಗಳ ಮಾಹಿತಿ ನೀಡುವ ಛಾಯಾಚಿತ್ರಗಳು, ಸಂಕ್ಷಿಪ್ತ ಮಾಹಿತಿ ಒದಗಿಸುವ ಬ್ಯಾನರ್‌ಗಳನ್ನು ಫಲಪುಷ್ಪ ಪ್ರದರ್ಶನದಲ್ಲಿ ನೋಡಬಹುದಾಗಿದೆ. ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ಹೇಳಿದ್ದಾರೆ. ತೇಜಸ್ವಿ ಅವರು ರಚಿಸಿದ ನಾಟಕಗಳ ಪ್ರದರ್ಶನ, ತೇಜಸ್ವಿ ಒಡನಾಡಿಗಳು, ಕುಟುಂಬದವರೊಂದಿಗೆ ಸಂವಾದ ಕಾರ್ಯಕ್ರಮಗಳೊಂದಿಗೆ. ತೇಜಸ್ವಿ ಅವರ ಮಾಯಾಲೋಕವನ್ನು ಇಂದಿನ ಯುವ ಸಮುದಾಯಕ್ಕೆ ಪರಿಚಯಿಸಲಾಗುತ್ತದೆ.

ಪೂರ್ಣಚಂದ್ರ ತೇಜಸ್ವಿ ಅವರಿಗೆ ಸಂಬಂಧಿಸಿದ ವ್ಯಂಗ್ಯಚಿತ್ರಗಳ ಪ್ರದರ್ಶನ, ಅವರ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಅವರು ನೀಡಿರುವ ಸಂದರ್ಶನಗಳನ್ನು ಎಲ್‌ಇಡಿ ಪರದೆಗಳ ಮೇಲೆ ಪ್ರಸಾರ ಫಲಪುಷ್ಪ ಪ್ರದರ್ಶನದ ವಿಶೇಷ ಆಕರ್ಷಣೆ. ಜೊತೆಗೆ ನಿಸರ್ಗದ ಮಡಿಲಲ್ಲಿ ತೇಜಸ್ವಿ ಅವರು ಬದುಕಿದ ಪರಿಯನ್ನು ಪುಷ್ಪಗಳ ಮೂಲಕ ಅನಾವರಣ ಮಾಡಲಾಗಿದೆ.

**50 ಸಾವಿರ ಹೂವಿನ ಕುಂಡ :** 'ಫಲಪುಷ್ಪ ಪ್ರದರ್ಶನದಲ್ಲಿ ಕಬ್ಬನ್ ಉದ್ಯಾನ, ಕೆಮ್ಮಣ್ಣುಗುಂಡಿ, ಊಟಿಯ ಉದ್ಯಾನಗಳಿಂದ 50 ಸಾವಿರಕ್ಕೂ ಹೆಚ್ಚು ಹೂವಿನ ಕುಂಡಗಳು ಇದರ ಜೊತೆಗೆ ಹೊರ ರಾಜ್ಯ ಮತ್ತು ವಿದೇಶಗಳಿಂದ ವಿವಿಧ ಬಗೆಯ ಹೂವುಗಳನ್ನು ತರಿಸಿ ಶೃಂಗಾರ ಮಾಡಲಾಗಿದ್ದು. ಸೇವಂತಿಗೆ, ಗುಲಾಬಿ, ಪಾಯಿನ್ಸಿಟಿಯಾ, ಪೆಂಟಾಸ್, ಜರ್ಬೇರಾ, ಜಿರೇನಿಯಂ ಇತ್ಯಾದಿ ಹೂವುಗಳು ವಿಶೇಷ ಆಕರ್ಷಣೆಯಾಗಿದೆ. ಬೆಂಗಳೂರಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಗಣರಾಜ್ಯೋತ್ಸವ ಕಾರ್ಯಕ್ರಮದ ಧ್ವಜಾರೋಹಣ ನೆರವೇರಿಸಿ. ರಾಜ್ಯವನ್ನು ಉದ್ದೇಶಿ ಭಾಷಣ ಮಾಡವುದುವಾಡಿಕೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಿತ ವಿವಿಧ ಕ್ಷೇತ್ರದ ಹಲವಾರು ಗಣ್ಯರ ಹಾಗೂ ಶಾಲಾ ಮಕ್ಕಳ ಹಾಜರಾತಿ ಕಾರ್ಯಕ್ರಮ ರಂಗೇರುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ನಾಡಿನ ಮೂಲೆ ಮೂಲೆಗಳಲ್ಲೂ ಗಣರಾಜ್ಯೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಿ ಸಿಹಿ ಹಂಚಲಾಗುತ್ತದೆ.

**– ಮಂಜುನಾಥ್ ನಾಯ್ಕ್, ಬೆಂಗಳೂರು**


### ಸಹಕಾರ ಕ್ಷೇತ್ರಕ್ಕೆ ಆಶಾದಾಯಕ ಭವಿಷ್ಯವಿದೆ; ನೂತನ ವಲಯಗಳತ್ತ ಗಮನಹರಿಸಬೇಕಿದೆ

# ಸಹಕಾರ ಶಿಕ್ಷಣ - ತರಬೇತಿಯ ಪುನರ್ ನಿರ್ಮಾಣ ಅಗತ್ಯ

## ಸಂದರ್ಶನದಲ್ಲಿ ಪ್ರಬುದ್ಧ ಸಹಕಾರ ಚಿಂತಕ ಪ್ರೊ. ಯಶವಂತ ಡೋಂಗ್ರೆ

**ಸಹಕಾರ ಕ್ಷೇತ್ರದ ಕುರಿತು ಅವಿರತ ಚಿಂತನೆ ಮಾಡಿದವರ ಸಂಖ್ಯೆ ಬಹಳ ಕಡಿಮೆ. ಅಂತಹ ಚಿಂತಕರ ಪಟ್ಟಿಯಲ್ಲಿ ಮೊದಲ ಸಾಲಿನಲ್ಲಿ ನಿಲ್ಲುತ್ತಾರೆ ಯಶವಂತ ಡೋಂಗ್ರೆ ಅವರು. ಮೂಲತಃ ಯಶವಂತ ಡೊಂಗ್ರೆ ಅವರು ಪ್ರಬುದ್ಧ ಶಿಕ್ಷಣ– ತರಬೇತಿ ತಜ್ಞರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಹಕಾರ ವಲಯದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದವರು. ಪ್ರಸ್ತುತ ಖಾಸಗಿ ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಗಳಾಗಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಸಹಕಾರ ಚಳವಳಿ ಅಸ್ತಿತ್ವದಲ್ಲಿರುವ ಬಹುತೇಕ ದೇಶಗಳ ಪ್ರವಾಸ ಮಾಡಿ ಸಹಕಾರ ಕುರಿತು ಅಧ್ಯಯನ ನಡೆಸಿ, ಸಹಕಾರದ ಬಗ್ಗೆ ಸಂಶೋಧನೆ, ಅನ್ವೇಷಣೆ, ಆವಿಷ್ಕಾರಗಳ ಕುರಿತು ಹಲವಾರು ಪ್ರಬಂಧಗಳನ್ನು ಮಂಡಿಸಿದ್ದಾರೆ.**

**ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಯುವಜನರ ವಿಭಾಗದ ಮುಖ್ಯಸ್ಥರಾಗಿ, ಕೇಂದ್ರ ಸಹಕಾರ ಸಚಿವಾಲಯ, ರಾಷ್ಟ್ರೀಯ ಸಹಕಾರ ಯೂನಿಯನ್ ರಚಿಸಿರುವ ಹಲವಾರು ಸಮಿತಿಗಳಲ್ಲಿ ಪ್ರಬುದ್ಧತೆಯಿಂದ ವಿಚಾರ ಮಂಡಿಸುವವರಾಗಿದ್ದಾರೆ. ರಾಷ್ಟ್ರೀಯ ಸಹಕಾರ ನೀತಿ, ತ್ರಿಭುವನ್ ವಿಶ್ವವಿದ್ಯಾನಿಲಯ ಸ್ಥಾಪನೆಯಲ್ಲಿ ಮಹತ್ತರ ಕೊಡುಗೆ ನೀಡಿದ್ದಾರೆ. ಅಂತಾರಾಷ್ಟ್ರೀಯ ಸಹಕಾರ ಚಳವಳಿ, ಭಾರತದ ಸಹಕಾರ ಚಳವಳಿ, ಕರ್ನಾಟಕದ ಸಹಕಾರ ಚಳವಳಿಯ ಸಾಧನೆ – ವೈಫಲ್ಯಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದಾರೆ. ಸಹಕಾರ ಸಂಸ್ಥೆಗಳ ಯಶಸ್ವಿಗೆ ಅಮೂಲ್ಯ ಸಲಹೆಗಳನ್ನು ನೀಡುವವರಾಗಿದ್ದಾರೆ. ಡೋಂಗ್ರೆ ಅವರು ಅಧ್ಯಯನಶೀಲರು. ಅಮಿತ ಉತ್ಸಾಹದಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವವರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಕಾರ್ಯಚಟುವಟಿಕೆಗಳನ್ನು ಕುತೂಹಲದಿಂದ ಗಮನಿಸುತ್ತಿರುತ್ತಾರೆ. ಉತ್ತಮ ಸಲಹೆಗಳನ್ನು ನೀಡುತ್ತಾ ಬಂದಿದ್ದಾರೆ. ಸಹಕಾರ ಪತ್ರಿಕೆಯ ಪತ್ರಿಕಾ ಬಳಗ ಅವರನ್ನು ಸಂದರ್ಶಿಸಿದಾಗ ತಮ್ಮ ಆಳವಾದ ಅಧ್ಯಯನ, ಬಹುಮುಖ ಚಿಂತನೆ ಸಹಕಾರ ಚಳವಳಿಯ ಬಗೆಗಿನ ಕಾಳಜಿ, ಸಹಕಾರ ಶಿಕ್ಷಣ ತರಬೇತಿಯ ಬಗ್ಗೆ ತಮಗಿರುವ ಅಭಿಮಾನದ ಹೂರಣವನ್ನು ತೆರೆದಿಟ್ಟಿದ್ದಾರೆ. ಸಹಕಾರ ಕ್ಷೇತ್ರದ ಭೂತಕಾಲ ಚೆನ್ನಾಗಿತ್ತು. ವರ್ತಮಾನ ಕಾಲ ಗೊಂದಲಮಯ, ಭವಿಷ್ಯಕಾಲ ಹೇಗಿರುತ್ತೆ? ಎಂಬ ಪ್ರಶ್ನೆಗೆ ಅವರ ಅಭಿಪ್ರಾಯಗಳು ಬೋಧಪ್ರದವಾಗಿದ್ದವು.**



ಸಹಕಾರ ಕ್ಷೇತ್ರದ ಭವಿಷ್ಯ ಉಜ್ವಲವಾಗಿದೆ. ಸಮಾಧಾನಕರವಾಗಲಿದೆ. ತೃಪ್ತಿದಾಯಕ ಎನ್ನಲಡ್ಡಿ ಇಲ್ಲ. ಆದರೆ, ಹಾಗಾಗಬೇಕಾದರೆ ಕೆಲವು ಬದಲಾವಣೆಗಳು, ಮಾರ್ಪಾಡುಗಳು ಅಗತ್ಯವಾಗಿ ಆಗಬೇಕಿದೆ. ಸಹಕಾರ ಸಂಸ್ಥೆಗಳನ್ನು ನಡೆಸುವವರ ಮನೋಭಾವನೆಯಲ್ಲಿ ಬದಲಾವಣೆ ಆಗಬೇಕಿದೆ. ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿ ಕ್ಷಿಪ್ರಗತಿಯಲ್ಲಿ ಸಹಕಾರ ವಲಯ ಹಿಂದೆ ಬೀಳುವಂತಿಲ್ಲ. ಕೃಷಿ ಪತ್ತಿನ ಸಹಕಾರ ಸಂಘಗಳು, ಕೃಷಿ ಪತ್ತಿನ ವ್ಯವಸ್ಥೆ ಸೀಮಿತವಾಗುವಂತಿಲ್ಲ. ತನ್ನ ಸದಸ್ಯರ ಸರ್ವಾಂಗೀಣ ಅಗತ್ಯಗಳೇನು? ಎಂಬುದನ್ನು ಅಧ್ಯಯನ ಮಾಡಿ ಅವುಗಳನ್ನು ಅರಿತುಕೊಂಡು ಅವುಗಳನ್ನು ಪೂರೈಸಲು ಸಿದ್ಧವಿರಬೇಕು. ಈ ಮಾತು ಎಲ್ಲ ಸಹಕಾರಿಗಳಿಗೂ ಅನ್ವಯವಾಗುತ್ತದೆ. ಸಾಲ ನೀಡಿಕೆ, ಸಾಲ ವಸೂಲಾತಿ, ಲಾಭಗಳಿಕೆ – ಇವಿಷ್ಟೇ ಆದರೆ ಸಂಘದ ಭವಿಷ್ಯ ಉಜ್ವಲ ಆಗದು. ಎಲ್ಲ ಆಯಾಮಗಳಲ್ಲೂ ವಿವಿಧೋದ್ದೇಶ ಪ್ರಕ್ರಿಯೆಗೆ ಒಳಪಡಬೇಕಾಗುತ್ತದೆ.

ಸಹಕಾರ ಕ್ಷೇತ್ರದ ಪ್ರಸ್ತುತ ಸಂಸ್ಥೆಗಳ ಬಗ್ಗೆ ಕಳವಳ ಪಡಬೇಕಾಗಿಲ್ಲ. ಹಲವಾರು ಸಂಘ ಸಂಸ್ಥೆಗಳು ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ ಅದು ಸಂಘಗಳನ್ನು ನಡೆಸುವವರ ಮನೋಭಾವನೆಯನ್ನು ಅವಲಂಬಿಸಿರುತ್ತದೆ.

ಸಹಕಾರ ಸಂಘಗಳ ಗುರಿಗಳಲ್ಲಿ ಸಮಗ್ರ ಬದಲಾವಣೆ ಅಗತ್ಯ. ಇಂದು ಸಹಕಾರ ಸಂಘಗಳು ಆರೋಗ್ಯ, ಉದ್ಯೋಗ ಸೃಷ್ಟಿ, ಶಿಕ್ಷಣದ ಬಗ್ಗೆ ಆದ್ಯತೆಯನ್ನು ಇರಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ ಕೇರಳದಲ್ಲಿ ಶೇ.75ರಷ್ಟು ಆರೋಗ್ಯ ಸಹಕಾರ ವಲಯ ಯಶಸ್ಸು ಕಂಡಿದೆ. ಸಹಕಾರ ವಲಯ ಪ್ರಜಾಸತ್ತಾತ್ಮಕವಾಗಿರಬೇಕು. ಸ್ಪರ್ಧಾತ್ಮಕವಾಗಿದ್ದಾಗಲೇ, ಗುಣಮಟ್ಟ ಉತ್ತಮವಾಗಿರುವುದು.



ವಿದೇಶಗಳಲ್ಲಿ ಸಹಕಾರ ಸಂಘಗಳು ಖಾಸಗಿ ಸಂಸ್ಥೆಗಳೊಟ್ಟಿಗೆ ಒಡಂಬಡಿಕೆ ಮಾಡಿಕೊಂಡು ಪ್ರಗತಿ ಸಾಧಿಸಿರುವುದನ್ನು ಕಾಣಬಹುದಾಗಿದೆ. ಇದರ ಅಡಿಯಲ್ಲಿ ಸಹಕಾರ ಸಂಸ್ಥೆಗಳ ನೀತಿಯಲ್ಲಿ ಸಮರ್ಪಕ ಬದಲಾವಣೆಯಾಗಬೇಕಾಗಿದೆ ಸಹಕಾರ ಸಂಸ್ಥೆಗಳಲ್ಲಿ ನಂಬಿಕೆ, ಗೌಣವಾಗಿಬಿಟ್ಟಿದೆ. ನಂಬಿಕೆಗೆ ವಿಶ್ವಾಸಕ್ಕೆ ಪ್ರಾಧಾನ್ಯತೆ ನೀಡಬೇಕಾಗಿದೆ. ಇದರ ಹಿನ್ನೆಲೆಯಲ್ಲಿ ಸಹಕಾರ ಸಂಘಗಳಲ್ಲಿ ವಿವಿಧೋದ್ದೇಶಗಳ ತುಡಿತ ಮೂಡಿ ಬರಬೇಕು ಎಂದು ಡೊಂಗ್ರೆ ಅವರು ಪ್ರತಿಪಾದಿಸಿದ್ದಾರೆ.

ರಾಷ್ಟ್ರೀಯ ಸಹಕಾರ ನೀತಿಯ ಪರಿಣಾಮದ ಬಗ್ಗೆ ರಾಷ್ಟ್ರೀಯ ಸಹಕಾರ ನೀತಿ ಶಿಫಾರಸ್ಸು ಸಮಿತಿ ಸದಸ್ಯರು ಆಗಿದ್ದ ಡೊಂಗ್ರೆ ಅವರು ರಾಷ್ಟ್ರೀಯ ಸಹಕಾರ ನೀತಿಯಲ್ಲಿ ಹಲವಾರು ಉಪಯುಕ್ತ ಶಿಫಾರಸ್ಸುಗಳಿವೆ. ಭವಿಷ್ಯದಲ್ಲಿ ಸಹಕಾರ ಸಂಸ್ಥೆಗಳು ಯಶಸ್ವಿಯಾಗಿ ಕಾರ್ಯ ಮಾಡಲು ಹಲವು ಸಲಹೆಗಳಿವೆ. ಸಹಕಾರ ನೀತಿಯನ್ನು ಮುಕ್ತ ಮನಸ್ಸಿನಿಂದ ಯೋಚಿಸಬೇಕು. ಹಾಗೂ ಪ್ರಸ್ತುತ ಅನುಷ್ಠಾನಕ್ಕೆ ತರಬೇಕಾಗಿದೆ ಎನ್ನುತ್ತಾರೆ.

ಸಹಕಾರ ಶಿಕ್ಷಣ– ತರಬೇತಿಯ ಬಗ್ಗೆ ವಿಪುಲವಾಗಿ ಮಾತನಾಡಿದ ಡೋಂಗ್ರೆ ಅವರು ಸಹಕಾರ ಶಿಕ್ಷಣ ತರಬೇತಿ ಮೂಲಕ ವೃತ್ತಿ ಕೌಶಲ್ಯಕ್ಕೆ ಪ್ರಾಮುಖ್ಯತೆ ಕೊಡಬೇಕು. ಇಂದಿನ ಸಹಕಾರ ಶಿಕ್ಷಣ, ತರಬೇತಿಯಲ್ಲಿ ಆಮೂಲಾಗ್ರ ಬದಲಾವಣೆಗೆ ಸಲಹೆ ನೀಡಿದ ಅವರು ಕೌಶಲ್ಯ ತುಂಬುವ ಶಿಕ್ಷಣ – ತರಬೇತಿ ಉದ್ಯೋಗ ಸೃಷ್ಟಿಗೆ ಪೋಷಕವಾಗಬೇಕು. ತರಬೇತಿ ವಿಧಾನದಲ್ಲಿ ವಿಕೇಂದ್ರೀಕರಣವಾಗಬೇಕು. ತನ್ನ ಸಮಸ್ಯೆಗೆ ತರಬೇತಿ ಕೇಂದ್ರದಲ್ಲಿ ಪರಿಹಾರ ದೊರಕುತ್ತದೆ ಎಂಬ ವಿಶ್ವಾಸ ಜನರಲ್ಲಿ ಮೂಡಬೇಕು.

ಸಹಕಾರ ಶಿಕ್ಷಣ, ತರಬೇತಿ ಗರಿಷ್ಠ ಪ್ರಮಾಣದ ಗುಣಮಟ್ಟದ್ದಾಗಿರಬೇಕು. ತರಬೇತಿ ದಾರರು ಪ್ರಬುದ್ಧತೆಯನ್ನು ಉಳ್ಳವರಾಗಿರಬೇಕು ತನ್ನ ಸುತ್ತಲಿನ ಸಹಕಾರ ಸಂಸ್ಥೆಗಳ ಸಮಸ್ಯೆಗಳ ಅಧ್ಯಯನ ನಡೆಸಿ ಪರಿಹಾರಗಳನ್ನು ಸೂಚಿಸುವವರಾಗಿರಬೇಕು. ಗುಣಮಟ್ಟದ ತರಬೇತಿ ಅಭ್ಯರ್ಥಿಗಳನ್ನು ಆರಿಸಿಕೊಳ್ಳುವುದಕ್ಕೆ ಅಭ್ಯರ್ಥಿಗಳು ತರಬೇತಿ ಕೇಂದ್ರಗಳನ್ನು ಹುಡುಕಿಕೊಂಡು ಬರುವಂತೆ ವ್ಯವಸ್ಥೆ ಆಗಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಹಕಾರ ಕಾನೂನಿನ ಬಗ್ಗೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸಿದ ಡೊಂಗ್ರೆ ಅವರು ಸಹಕಾರ ಸಂಸ್ಥೆಗಳ ಮೇಲೆ ಸರ್ಕಾರದ ಹತೋಟಿ ಇರುವಕಡೆಯೂ ಅಲ್ಪ ಸಲ್ಪ ದೋಷಗಳಿವೆ. ಸಹಕಾರಿಗಳಿಗೆ ಪೂರ್ಣ ಸ್ವಾತಂತ್ರ್ಯ ಇರುವ ಕಡೆಯೂ ಅಲ್ಪಸ್ವಲ್ಪ ದೋಷಗಳಿವೆ. ಅಂತಹ ಲೋಪಗಳನ್ನು ಗಮನಿಸಿ ಸರ್ಕಾರ ಸಹಕಾರ ಕಾಯ್ದೆ ತಿದ್ದುಪಡಿಗಳನ್ನು ತರಬೇಕು ಆಗ ಮಾತ್ರ ಸಹಕಾರ ಚಳವಳಿ ಪಾರದರ್ಶಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ ಎನ್ನುತ್ತಾರೆ.

ಸಹಕಾರ ತರಬೇತಿ ಪಡೆದವರಿಗೆ ಸಹಕಾರ ಸಂಘಗಳ ನೌಕರಿಯಲ್ಲಿ ಆದ್ಯತೆ ಇರಬೇಕು. ಅಧಿಕಾರೇತರರಿಗೂ ಜಾಗೃತಿ ಮೂಡಿಸುವ ಸಹಕಾರ ಶಿಕ್ಷಣ ಪಡೆಯುವುದು ಕಡ್ಡಾಯ ವಾಗಬೇಕು ಎಂಬುದನ್ನು ಸಂಪೂರ್ಣವಾಗಿ ಒಪ್ಪುತ್ತಾರೆ ಡೋಂಗ್ರೆ ಅವರು.

ದೇಶದ ಸುಸ್ಥಿರ ಆರ್ಥಿಕ ಬೆಳವಣಿಗೆಗೆ ಪೂರಕವಾದ ವಲಯ ಸಹಕಾರ ಕ್ಷೇತ್ರ. ಆದ್ದರಿಂದ ಪ್ರಾಥಮಿಕ ಸಹಕಾರ ಸಂಘಗಳ ಆಡಳಿತ, ಅದರ ವ್ಯಾಪ್ತಿ ಹಾಗೂ ಕಾರ್ಯಚಟುವಟಿಕೆಗಳಲ್ಲಿ ಗುಣಮಟ್ಟದ ಬದಲಾವಣೆಯಾಗಬೇಕು. ಯುವಜನತೆಗೆ ಸಹಕಾರ ಕ್ಷೇತ್ರದಿಂದ ದೊರೆಯುವ ಸೌಲಭ್ಯಗಳ ಕುರಿತು ಜಾಗೃತಿ ಮೂಡಿಸಬೇಕು. ಸಹಕಾರ ಕ್ಷೇತ್ರದ ವ್ಯವಹಾರ ಹಾಗೂ ಸೇವೆಗಳಲ್ಲಿ ತಂತ್ರಜ್ಞಾನದ ಅಳವಡಿಕೆಯಾದರೆ ಸುಸ್ಥಿರವಾದ ಅಭಿವೃದ್ಧಿಯನ್ನು ಕಾಣಬಹುದಾಗಿದ್ದು, ಅಂತಾರಾಷ್ಟ್ರೀಯ ಸಹಕಾರ ವರ್ಷದ ಆಚರಣೆಗೊಂದು ಪ್ರಾಮುಖ್ಯತೆ ಸಿಗಲಿದೆ ಎಂಬ ಆಶಯವನ್ನು ಡೋಂಗ್ರೆಯವರು ವ್ಯಕ್ತಪಡಿಸಿದರು.

ಕೃಷಿಕರ ಉತ್ಪನ್ನಗಳಿಗೆ ಸಹಕಾರ ಸಂಸ್ಥೆಗಳು ಮಾರಾಟದ ಏಜೆನ್ಸಿಗಳಾಗಬೇಕು. ಅಮುಲ್ ಇಂದು ಉತ್ತಮ ಸಹಕಾರಿ ವ್ಯವಸ್ಥೆಯಾಗಿ ಜಗತ್ತಿನಲ್ಲಿ ಗುರುತಿಸಿಕೊಂಡಿದೆ. ರಚನಾತ್ಮಕ ಸಹಕಾರ ವ್ಯವಸ್ಥೆಯಿಂದ ಮಾತ್ರ ಸಹಕಾರ ಚಳವಳಿಯ ಪರಿಣಾಮಕಾರಿ ಬೆಳವಣಿಗೆ ಸಾಧ್ಯವಾಗಲಿದೆ. ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಮೊದಲಬಾರಿಗೆ ಆಯ್ಕೆಯಾಗಿ ಬಂದವರಿಗೆ ಸಹಕಾರ ಶಿಕ್ಷಣ ಪಡೆಯುವುದು ಕಡ್ಡಾಯವಾಗಬೇಕು. ಸಹಕಾರ ಕ್ಷೇತ್ರದಲ್ಲಿ ಒಂದೇ ಕಾನೂನು ಕಾಯಿದೆ ಇರಬೇಕು ಇದರಿಂದ ಯಾವುದೆ ರೀತಿಯ ಗೊಂದಲಗಳಿರುವುದಿಲ್ಲ. ಈ ಎಲ್ಲಾ ಅಂಶಗಳು ರಚನಾತ್ಮಕವಾಗಿ ಸಹಕಾರ ವ್ಯವಸ್ಥೆಗೆ ಪೂರಕವಾದವು ಎಂಬುದಾಗಿ ಡೊಂಗ್ರೆ ಅವರು ತಿಳಿಸಿದರು.

ದೇಶದ ಆರ್ಥಿಕತೆಯಲ್ಲಿ ಸಹಕಾರ ರಂಗದ ಪಾತ್ರದ ಕುರಿತು ಮಾತನಾಡಿದ ಡೋಂಗ್ರೆ ಅವರು ಸಹಕಾರ ಸಂಸ್ಥೆಗಳು ಸರ್ಕಾರಿ, ಖಾಸಗಿ ಸಂಸ್ಥೆಗಳಿಗೆ ಸ್ಪರ್ಧೆ ನೀಡುವಂತಾಗಬೇಕು. ಪ್ರತಿ ಕ್ಷೇತ್ರದಲ್ಲಿಯೂ ಕನಿಷ್ಠ ಶೇ.10 ರಷ್ಟು ಹಾಗೂ ಸಹಕಾರ ಕ್ಷೇತ್ರದ ಪಾಲು, ಭಾಗವಹಿಸುವಿಕೆ ಇರಬೇಕು. ಸಹಕಾರ ಸಂಸ್ಥೆಗಳು ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸುವುದರ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಅಗತ್ಯತೆ ಇದೆ. ಈಗಾದಲ್ಲಿ ಮಾತ್ರ 10–20 ವರ್ಷಗಳಲ್ಲಿ ಸಂಘಗಳು ಕಾರ್ಯಯೋಜನೆಯಿಂದ ಭವಿಷ್ಯವನ್ನು ನಿರ್ಮಿಸಿಕೊಳ್ಳಬಹುದಾಗಿದೆ. ಆಗ

ಮಾತ್ರ ಸಹಕಾರ ಕ್ಷೇತ್ರದ ದಿಕ್ಸೂಚಿಯನ್ನು ಬಲಿಷ್ಠಗೊಳಿಸಲು ಸಾಧ್ಯ ಎಂದರು. ಸಹಕಾರ ಸಂಸ್ಥೆಗಳು ತನ್ನ ಸದಸ್ಯರ ಅಗತ್ಯಗಳನ್ನು ಪೂರೈಸುವುದರ ಜತೆಗೆ ವಿವಿಧೋದ್ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ಸಹಕಾರ ಕ್ಷೇತ್ರ ಹೇಗೆ ಬೆಳೆಯಬೇಕೆಂದರೆ ಪ್ರಸ್ತುತ ಕೃಷಿ ಸಂಘಗಳಿಗೆ ಸರ್ಕಾರ ನೀಡುವ ಬೆಂಬಲ ಬೆಲೆ ಯೋಜನೆ ಬದಲು ಸಹಕಾರ ಸಂಸ್ಥೆಗಳೇ ಬೆಲೆ ನಿಗಧಿ ಮಾಡುವಂತಾಗಬೇಕು. ಅಧಿಕ ಬೆಲೆಯನ್ನು ರೈತರಿಗೆ ನೀಡಬೇಕಾದರೆ ಉತ್ಪನ್ನಗಳನ್ನು ರೂಪಾಂತರಿಸಿ, ಸಂಸ್ಕರಿಸಿ, ಮಾರಾಟ ಮಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಸಹಕಾರ ಸಂಘಗಳ ಪಾತ್ರ ರಚನಾತ್ಮಕವಾಗುತ್ತದೆ. ಇದರಿಂದ ಉದ್ಯೋಗವಕಾಶಗಳು, ಆರ್ಥಿಕ ಸದೃಢತೆ ವಿಸ್ತಾರವಾಗುತ್ತದೆ.

ಸಹಕಾರ ಸಂಸ್ಥೆಗಳ ಬಲವರ್ಧನೆ ಕುರಿತು ಮಾತನಾಡಿದ ಡೋಂಗ್ರೆ ಅವರು ಸಹಕಾರ ಸಂಘ ಸಂಸ್ಥೆಗಳು ಉತ್ತಮ ವಿಚಾರವನ್ನು ಅಳವಡಿಸಿಕೊಳ್ಳಬೇಕು. ಸಹಕಾರಿ ಉಪಕ್ರಮಗಳ ಬಗ್ಗೆ ಯೋಜನೆ ರೂಪಿಸುವುದರ ಜೊತೆಗೆ ಸ್ವಾಯತ್ತತೆಯಿಂದ, ಪಾರದರ್ಶಕತೆಯಿಂದ ಕಾರ್ಯನಿರ್ವಹಿಸಿದರೆ, ಜನರಲ್ಲಿ ನಂಬಿಕೆ ಹಾಗೂ ವಿಶ್ವಾಸ ಹೆಚ್ಚಾಗುತ್ತದೆ.

ವೃತ್ತಿಪರ ಆಡಳಿತ ನಿರ್ವಹಣೆಗಾಗಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಸಹಕಾರ ಚಳವಳಿ ಸುಧಾರಣೆಯಾಗಲು ಸಹಕಾರಿಗಳಲ್ಲಿ ಇಚ್ಛಾಶಕ್ತಿ, ಬದ್ಧತೆ, ದೂರದೃಷ್ಟಿಯ ಚಿಂತನೆಯ ಜೊತೆಗೆ ಕೌಶಲ್ಯಯುತ ತಂತ್ರಗಾರಿಕೆಗೆ ಪೂರಕ ಶಿಕ್ಷಣ, ತರಬೇತಿಯು ಸಹ ಅಗತ್ಯವಾಗಿದೆ ಎಂಬುದು ಅವರ ಆಶಯವಾಗಿದೆ.

**ಕೃಪೆ : ಸಹಕಾರ ವಾರಪತ್ರಿಕೆ**

## ಬಿ.ಡಿ. ಭೂಕಾಂತ್ ಅವರಿಗೆ “ರಾಷ್ಟ್ರೀಯ ಸಹಕಾರ ಬಂಧು” ಪ್ರಶಸ್ತಿ ಪ್ರದಾನ




**ನವದೆಹಲಿ:** ನ್ಯಾಷನಲ್ ಸೆಮಿನಾರ್ ಇಂಡಸ್ಟ್ರಿಯಲ್ ಕಾಂಟ್ರಿಬ್ಯೂಷನ್ ಫಾರ್ ನ್ಯಾಷನಲ್ ಎಕನಾಮಿಕ್ ಮತ್ತು ಸೋಷಿಯಲ್ ಡೆವಲಪ್‌ಮೆಂಟ್, ನವದೆಹಲಿ ಈ ಸಂಸ್ಥೆಯಿಂದ ರಾಜ್ಯದ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಬಿ.ಡಿ. ಭೂಕಾಂತ್ ರವರಿಗೆ "ರಾಷ್ಟ್ರೀಯ ಸಹಕಾರ ಬಂಧು" ಅವಾರ್ಡನ್ನು ನೀಡಿ ಗೌರವಿಸಿ ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಕೇಂದ್ರದ ಮಾಜಿ ಸಚಿವರು ನವಲಾಲ್, ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಕುಲದೀಪ್ ಸಿಂಗ್, ಸಂಸತ್ತಿನ ಸದಸ್ಯರಾದ ಮಾಳವಿಯಾ ಹಲವಾರು ಗಣ್ಯರು ಉಪಸ್ಥಿತರಿದ್ದರು.



**ಬಾದಾಮಿ:** ಮಹಾಕೂಟೇಶ್ವರ ಪತ್ತಿನ ಸಹಕಾರ ಸಂಘ ನಿ., ಬಾದಾಮಿ, ಬಾಗಲಕೋಟೆ ಜಿಲ್ಲೆ ಇದರ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವ ಪತ್ತಿನ ಮಹಾಮಂಡಳದ ನಿರ್ದೇಶಕರಾದ ಹೊನ್ನಯ್ಯ ವೀ ಹಿರೇಮಠರವರನ್ನು ಗೌರವಿಸಲಾಯಿತು.



# ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ; ಸಂಶೋಧನೆಗೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ

## (Tribhuvan Sahakara University; Research and Training Transforming Cooperative Education)



**ಡಾ. ಗುರುಸ್ವಾಮಿ**
ಸಹಕಾರ ಸಂಘಗಳ ಅಪರ ನಿಬಂಧಕರು (ನಿ),
ಬೆಂಗಳೂರು

“ಒಂದು ಮಗುವನ್ನು ಗ್ರಾಮದ ಪ್ರಮುಖ ಸ್ಥಳದಲ್ಲಿ ಕುಳ್ಳರಿಸಿ ಅದರ ಮುಗ್ಧತೆಯನ್ನು ನೋಡಿ ಅರಿಯುವುದರ” ಮೂಲಕ ಪ್ರಾರಂಭವಾದ ಶಿಕ್ಷಣ ಮತ್ತು ತರಬೇತಿ ಅತೀ ಪುರಾತನವಾದ್ದು, ಋಷಿಮುನಿಗಳ ಆಶ್ರಮದಲ್ಲಿ ವೇದೋಪನಿಷತ್ತುಗಳ ಮತ್ತು ಶಸ್ತ್ರಾಭ್ಯಾಸಗಳಿಂದ ಮೊದಲ್ಗೊಂಡು ಇಂದು ಸಾಮಾಜಿಕ ಕಳಕಳಿ ಮತ್ತು ಅಭಿವೃದ್ಧಿಯ ಚಿಂತನೆಯೊಡನೆ ಜ್ಞಾನ–ವಿಜ್ಞಾನದ ಆವಿಷ್ಕಾರದೊಂದಿಗೆ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯ ಬೇಡಿಕೆಯು ಹೆಚ್ಚುತ್ತಾ ಎಲ್ಲಾ ರಂಗಗಳಿಗೂ ಅನಿವಾರ್ಯವಾಗಿದೆ. ಅದಕ್ಕೆ ಸಹಕಾರ ಕ್ಷೇತ್ರವೂ ಹೊರತಾಗಿಲ್ಲ. ಒಂದು ವ್ಯವಸ್ಥಿತವಾದ ಪದ್ಧತಿಯ ಮೂಲಕ ಜ್ಞಾನಾರ್ಜನೆಯ ಗುರಿಸಾಧನೆಗಾಗಿ ವಿದ್ಯಾಭ್ಯಾಸ ಪಡೆಯುವ ಮತ್ತು ಬೋಧಿಸುವ ಕಾಯಕವೇ ಶಿಕ್ಷಣವೆನ್ನಬಹುದು. ಒಂದು ನಿರ್ದಿಷ್ಟ ಕೌಶಲ್ಯ ಅಥವಾ ಪರಿಣತಿಯನ್ನು ಪಡೆಯುವ ಗುರಿಸಾಧನೆಗಾಗಿ ವಿದ್ಯಾಭ್ಯಾಸ ಗಳಿಸುವ ಮತ್ತು ಬೋಧಿಸುವ ಕಾರ್ಯವೇ ತರಬೇತಿ ಎನಿಸಿಕೊಳ್ಳುತ್ತದೆ. ವಿಚಾರಪೂರ್ಣ ಅಧ್ಯಯನದಿಂದ ಸತ್ಯವನ್ನು ತಿಳಿಯುವ, ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ, ಹೊಸ ಅರಿವನ್ನು ಕಂಡುಕೊಳ್ಳುವ ವ್ಯವಸ್ಥಿತ ಮತ್ತು ಸಂಘಟಿತ ರೀತಿಯಲ್ಲಿ ಅಧ್ಯಯನ ಮಾಡುವ ಪ್ರಕ್ರಿಯೆಯೇ ಸಂಶೋಧನೆ.

ಶಿಕ್ಷಣವು ಶೈಕ್ಷಣಿಕ ಅಧ್ಯಯನಕ್ಕೆ (Academic Studies) ಸಂಬಂಧಿಸಿದ ತಾತ್ವಿಕ ವಿದ್ಯಾಭ್ಯಾಸ (Theoritical Learning)ವಾಗಿರುತ್ತದೆ. ತರಬೇತಿಯು ನಿಶ್ಚಿತವಾದ ಕೌಶಲ್ಯ (Skill) ಹೆಚ್ಚಿಸಲು ಪ್ರಯೋಗದ ಅನ್ವಯಿಸುವಿಕೆ (Practical Application) ಹೊಂದಿರುತ್ತದೆ. ಶಿಕ್ಷಣ ಮತ್ತು ತರಬೇತಿಯ ಹಿನ್ನೆಲೆಯಲ್ಲಿ ಕಾರ್ಯದಕ್ಷತೆಯನ್ನು ಹೆಚ್ಚಿಸುವ, ಸಮಸ್ಯೆಗಳನ್ನು ಕಂಡುಹಿಡಿದು, ಪರಿಹಾರ ಸೂಚಿಸುವ ಕಾರ್ಯ ಸಂಶೋಧನೆಯಿಂದ ಸಾಧ್ಯವಾಗುತ್ತದೆ. ಆಡಳಿತ, ವ್ಯವಸ್ಥಾಪನೆ,

ಬ್ಯಾಂಕಿಂಗ್, ಪತ್ತು, ಮಾರಾಟ, ಉತ್ಪಾದನೆ, ಗ್ರಾಹಕ, ಹೈನುಗಾರಿಕೆ, ಮೀನುಗಾರಿಕೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಭಿನ್ನ ಕಾರ್ಯಗಳನ್ನು ಒಳಗೊಂಡಿರುವ ಸಹಕಾರ ಕ್ಷೇತ್ರಕ್ಕೆ ಶಿಕ್ಷಣ, ತರಬೇತಿ ಮತ್ತು ಸಂಶೋಧನೆ ಅನಿವಾರ್ಯ ಹಾಗೂ ಅತ್ಯಾವಶ್ಯಕವಾಗಿದೆ.

19ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಆಧುನಿಕ ಸಹಕಾರ ಚಳವಳಿಯ ಮೂಲಪುರುಷ ರಾಬರ್ಟ್ ಓವೆನ್ ನೇತೃತ್ವದಲ್ಲಿ ಪ್ರಾರಂಭವಾದ ಸಹಕಾರ ಚಳವಳಿಯಲ್ಲಿ ರೂಪಿತವಾದ "ರಾಕ್‌ಡೇಲ್ ತತ್ವ"ಗಳಲ್ಲಿ ಶಿಕ್ಷಣ ಮತ್ತು ಪ್ರಚಾರಕ್ಕೆ ಪ್ರಮುಖ ಆದ್ಯತೆಯನ್ನು ನೀಡಲಾಯಿತು. ಸಹಕಾರ ಚಳವಳಿಯನ್ನು ಪ್ರೋತ್ಸಾಹಿಸುವ ಮತ್ತು ಮಾರ್ಗದರ್ಶನವನ್ನು ನೀಡುವ ಉದ್ದೇಶದಿಂದ ಪ್ರಾರಂಭವಾದ ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು (International Cooperative Alliance - ICA) "ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ"ವನ್ನು ಸಹಕಾರದ ಏಳು ತತ್ವಗಳಲ್ಲಿ 5ನೇ ತತ್ವವಾಗಿ ಅಂಗೀಕರಿಸಿತು.

ಭಾರತದಲ್ಲಿ ಸಹಕಾರ ಚಳವಳಿಯು ಪ್ರಾರಂಭವಾಗುವ ಮೊದಲು ಸರ್. ಫ್ರೆಡ್ರಿಕ್ ನಿಕೋಲ್ಸನ್ ರವರು 1899ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ "ಸಹಕಾರ ಶಿಕ್ಷಣ"ದ ಮಹತ್ವದ ಬಗ್ಗೆ ತಿಳಿಸಿದ್ದರು. ಆ ನಂತರ 1915 ರಲ್ಲಿ ಸರ್ ಇ.ಡಿ. ಮ್ಯಾಕ್ಲಗನ್ ಸಮಿತಿ ವರದಿ, 1928ರ ರಾಯಲ್ ಕಮಿಷನ್ ವರದಿ, 1935ರ ಮಾಲ್‌ಕಾಮ್ ಡಾರ್ಲಿಂಗ್ ವರದಿಗಳಲ್ಲಿ ಸಹಕಾರ ಶಿಕ್ಷಣ ಮತ್ತು ತರಬೇತಿಯು ಸಹಕಾರ ಚಳವಳಿಗೆ ಅತ್ಯಾವಶ್ಯಕವೆಂದು ತಿಳಿಸಲಾಯಿತು. 1961 ರಲ್ಲಿ ಸ್ಥಾಪನೆಯಾದ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್ (National Cooperative Union of India - NCUI) ಸಹಕಾರ ಶಿಕ್ಷಣ ಮತ್ತು ತರಬೇತಿಯನ್ನು ಅತ್ಯಂತ ವ್ಯವಸ್ಥಿತವಾಗಿ ನೀಡುವ ಸಂಸ್ಥೆಯಾಗಿದ್ದು, ರಾಷ್ಟ್ರಮಟ್ಟದಲ್ಲಿ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್, ರಾಜ್ಯಮಟ್ಟದಲ್ಲಿ ಭಾರತದ ರಾಷ್ಟ್ರೀಯ ಸಹಕಾರ ಯೂನಿಯನ್, ರಾಜ್ಯಮಟ್ಟದಲ್ಲಿ ಸಹಕಾರ ಮಹಾಮಂಡಳಗಳು ಹಾಗೂ ಜಿಲ್ಲಾಮಟ್ಟದಲ್ಲಿ ಜಿಲ್ಲಾ ಸಹಕಾರ ಯೂನಿಯನ್‌ಗಳು ಸಹಕಾರಿಗಳಿಗೆ, ನೌಕರರಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತಾ ಬಂದಿವೆ. ರಾಷ್ಟ್ರೀಯ ಸಹಕಾರ ತರಬೇತಿ ಸಂಸ್ಥೆ (National Council for Cooperative Training - NCCT) ಯ ಆಡಳಿತಕ್ಕೆ ಒಳಪಟ್ಟ, ವೈಕುಂಠ ಮೆಹ್ತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಪುಣೆ (Vaikunta Mehta National Institute of Cooperative Management, Pune - VAMNICOM), ಪ್ರಾದೇಶಿಕ ಸಹಕಾರ ಆಡಳಿತ ತರಬೇತಿ ಸಂಸ್ಥೆಗಳು (Reginal Institute of Cooperative Management - RICM) ಮತ್ತು ಸಹಕಾರ ಆಡಳಿತ ತರಬೇತಿ ಸಂಸ್ಥೆಗಳು (Institute of Cooperative Management - ICM) ಸಹಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ತರಬೇತಿ ನೀಡುತ್ತಿವೆ.

ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ತರಬೇತಿ ಕೇಂದ್ರ, ಬೆಂಗಳೂರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ರೂರಲ್ ಬ್ಯಾಂಕಿಂಗ್, ಬೆಂಗಳೂರು, ಬ್ಯಾಂಕರ್ಸ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್, ಮಂಗಳೂರು, ಕರ್ನಾಟಕ ಹಾಲು ಮಹಾಮಂಡಳ ನಿ., ಬೆಂಗಳೂರು, ಆರ್.ಐ.ಸಿ.ಎಂ. ಬೆಂಗಳೂರು ಇತ್ಯಾದಿ ಸಂಸ್ಥೆಗಳು ಸಹಕಾರ ತರಬೇತಿ ಮತ್ತು ಶಿಕ್ಷಣವನ್ನು ನೀಡುತ್ತಿವೆ.

ಕೇಂದ್ರದಲ್ಲಿ ಸಹಕಾರ ಸಚಿವಾಲಯ ಪ್ರಾರಂಭವಾದ ನಂತರ ದೇಶದ ಸಹಕಾರಿ ಚಳವಳಿಯನ್ನು ವೃತ್ತಿಪರಗೊಳಿಸುವ, ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯನ್ನು ಸಮನ್ವಯಗೊಳಿಸಿ ಸಹಕಾರಿ ವಲಯದ ಆಧುನೀಕರಣ ಮತ್ತು ಗ್ರಾಮೀಣ ಅಭಿವೃದ್ಧಿ ಸಾಧಿಸುವ ಪ್ರಮುಖ ಉದ್ದೇಶದಿಂದ "ತ್ರಿಭುವನ ಸಹಕಾರಿ ವಿಶ್ವವಿದ್ಯಾಲಯ ಮಸೂದೆ, 2025"ನ್ನು ಸಂಸತ್ತಿನಲ್ಲಿ ಅಂಗೀಕರಿಸಿ, ಗುಜರಾತಿನ ಆನಂದ್ ಗ್ರಾಮೀಣ ನಿರ್ವಹಣಾ ಸಂಸ್ಥೆ (IRMA) ಯನ್ನು ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವಾಗಿ ಪರಿವರ್ತಿಸಿ, ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿದ ಸಂಸ್ಥೆ ಎಂದು ಘೋಷಿಸಲಾಗಿದೆ. ಇದು ಭಾರತದ ಸಹಕಾರಿ ವಲಯಕ್ಕೆ ಮೀಸಲಾಗಿರುವ ಮೊದಲ ರಾಷ್ಟ್ರೀಯ ವಿಶ್ವವಿದ್ಯಾಲಯವಾಗಿದೆ.

### ಎ) ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ (Tribhuvan Sahakari University - TSU)ದ ಪ್ರಾಮುಖ್ಯತೆ:

ಭಾರತದಲ್ಲಿ ಸುಮಾರು 845716 ಸಹಕಾರ ಸಂಸ್ಥೆಗಳು ನೋಂದಣಿಯಾಗಿದ್ದು, ಸುಮಾರು 31 ಕೋಟಿಗೂ ಹೆಚ್ಚು ಜನರು ಸದಸ್ಯರಾಗಿದ್ದರೆ. ಅಂದಾಜು 25 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಗಳಿದ್ದಾರೆ. ಆದರೆ ಸಹಕಾರಿಗಳ ಮತ್ತು ಸಿಬ್ಬಂದಿಗಳ ಶಿಕ್ಷಣ, ತರಬೇತಿ ವ್ಯವಸ್ಥೆ ಏಕರೂಪವಾಗಿರದೆ, ವಿವಿಧ ಪದ್ಧತಿಗಳನ್ನು ಅನುಸರಿಸಿ ಬಿಡಿ ಬಿಡಿಯಾಗಿ ವಿಸ್ತರಿಸಿಕೊಂಡಿದ್ದು, ಗುಣಮಟ್ಟದಲ್ಲಿ ಉತ್ತಮ ಸ್ಥಿತಿ ಕಾಯ್ದುಕೊಳ್ಳದೆ ತರಬೇತಿಗೊಂಡ ದಕ್ಷ ಮಾನವ ಸಂಪನ್ಮೂಲದ ಕೊರತೆ ತೀವ್ರವಾಗಿದೆ. ಸಹಕಾರಿಗಳು ಕೃಷಿ ಸಾಲ, ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ, ಮಾರಾಟ, ರಫ್ತು, ಗ್ರಾಮೀಣ ಹಣಕಾಸು ಮುಂತಾದ ವಲಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ವಲಯವಾರು ತರಬೇತಿ, ಸಂಶೋಧನೆ ಅಗತ್ಯವಿದೆ. ಅಲ್ಲದೆ ಆಡಳಿತ, ವ್ಯವಸ್ಥಾಪನೆ, ಆಡಿಟ್ ಮುಂತಾದ ವಿಷಯಗಳಲ್ಲಿ ಏಕರೂಪದ ಶಿಕ್ಷಣ ವ್ಯವಸ್ಥೆ ಅನುಷ್ಠಾನಗೊಳ್ಳಬೇಕಾಗಿದೆ. ಆದ್ದರಿಂದ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಕೇವಲ ಪದವಿ ನೀಡುವ ವಿಶ್ವವಿದ್ಯಾಲಯವಲ್ಲ. ಬದಲಿಗೆ ಇದು ಉನ್ನತಮಟ್ಟದ ಕ್ರಮಬದ್ಧವಾದ ಶಿಕ್ಷಣ, ತರಬೇತಿ, ಸಂಶೋಧನೆಯ ನೀತಿ ನಿರ್ಮಾಣದ ಜ್ಞಾನ ಕೇಂದ್ರವಾಗಿರಲಿದೆ.

### ಬಿ) ಉದ್ದೇಶಗಳು ಮತ್ತು ಕಾರ್ಯತತ್ಪರತೆ :

1) **ಶಿಕ್ಷಣ ಮತ್ತು ತರಬೇತಿ :** ಸಹಕಾರಿ ಆಡಳಿತ ನಿರ್ವಹಣೆ, ಹಣಕಾಸು, ಕಾನೂನು, ಆಡಿಟ್, ಮಾರುಕಟ್ಟೆ, ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಪದವಿ, ಡಿಪ್ಲೊಮಾ ಮತ್ತು ಪ್ರಮಾಣ ಪತ್ರಗಳ ಕೋರ್ಸ್‌ಗಳ ಮೂಲಕ ಉತ್ತಮ

ಶಿಕ್ಷಣ ಮತ್ತು ತರಬೇತಿಯನ್ನು ನೀಡುವುದು. ಸಹಕಾರಿ ಆಡಳಿತ ಮಂಡಲಿ ಸದಸ್ಯರಿಗೆ, ನೌಕರರಿಗೆ ನವೀಕೃತ ತರಬೇತಿ ನೀಡುವುದು, ರಾಷ್ಟ್ರಮಟ್ಟದಲ್ಲಿ ಗುಜರಾತ್‌ನ ಆನಂದ್ ಕ್ಯಾಂಪಸ್‌ನಲ್ಲಿ, ರಾಜ್ಯಮಟ್ಟ ಮತ್ತು ಜಿಲ್ಲಾ ಸಹಕಾರ ಗ್ರಾಮೀಣ ಮಟ್ಟದಲ್ಲಿ ತರಬೇತಿ ಕೇಂದ್ರಗಳನ್ನು ಕೇಂದ್ರ ಘಟಕ (ಹಬ್) ಮತ್ತು ಹಲವಾರು ಉಪಘಟಕಗಳ (ಸ್ಪೋಕ್ಸ್) ಜೊತೆ ಸಂಪರ್ಕ ಹೊಂದಿ ಅತ್ಯುತ್ತಮ ಶಿಕ್ಷಣ ಮತ್ತು ತರಬೇತಿ ನೀಡುವುದು.

2) **ಸಂಶೋಧನೆ ಮತ್ತು ನೀತಿ ನಿರೂಪಣೆ :** ಸಹಕಾರಿಗಳ ಆಡಳಿತ, ವ್ಯವಹಾರದ ಮಾದರಿ, ಡಿಜಿಟಲ್ ರೂಪಾಂತರ, ಗ್ರಾಮೀಣ ಜೀವನೋಪಾಯ ಮುಂತಾದ ವಿಷಯಗಳಲ್ಲಿ ಸಂಶೋಧನೆ ನಡೆಸುವುದು ಮತ್ತು ಈ ಬಗ್ಗೆ ಅಂತಾರಾಷ್ಟ್ರೀಯ ಸಹಕಾರಿ ಸಂಸ್ಥೆಗಳ ಸಹಯೋಗದಿಂದ ಕಾರ್ಯ ಯೋಜನೆ ರೂಪಿಸುವುದು.

3) **ವೃತ್ತಿ ನೈಪುಣ್ಯತೆ ಮತ್ತು ದಕ್ಷತೆ :** ಸಹಕಾರಿ ಶಿಕ್ಷಣದ ಪಠ್ಯಕ್ರಮವನ್ನು ಅಮೂಲಾಗ್ರವಾಗಿ ಪರಿಷ್ಕರಿಸಿ ಸೂಕ್ತ ಮಾನದಂಡಗಳನ್ನು ಸೂಚಿಸುವುದು. ತಂತ್ರಜ್ಞಾನ ಆಧಾರಿತ ಇ-ಲರ್ನಿಂಗ್ ಮತ್ತು ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಬಲಪಡಿಸುವುದು.

4) **ವಲಯ ಮಟ್ಟದ ತರಬೇತಿಯಲ್ಲಿ ನಾವೀನ್ಯತೆ :** ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ, ಕೃಷಿ, ಮಾರುಕಟ್ಟೆ, ಬ್ಯಾಂಕಿಂಗ್, ರಫ್ತು ಇತ್ಯಾದಿ ವಲಯಗಳಿಗೆ ಉತ್ಕೃಷ್ಟತೆಯ "ವಿಶೇಷ ಶಾಲೆ"ಗಳನ್ನು ಸ್ಥಾಪಿಸುವುದು. ಮಹಿಳೆಯರು, ಯುವಕರು ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಉದ್ಯಮಶೀಲತೆ ಮತ್ತು ತರಬೇತಿಯಲ್ಲಿ ಅವಕಾಶ ಕಲ್ಪಿಸುವುದು.

### ಸಿ) ಪಠ್ಯಕ್ರಮ ಮತ್ತು ತರಬೇತಿ ಮಾದರಿ :

1) **ಪ್ರಮಾಣಪತ್ರ ಕೋರ್ಸ್‌ಗಳು :** ಸಹಕಾರಿ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗೆ ಒಂದೆರಡು ವಾರಗಳ ತರಬೇತಿ ನೀಡುವುದು.

2) **ಡಿಪ್ಲೊಮಾ ಕೋರ್ಸ್‌ಗಳು :** ಸಹಕಾರಿ ಸಂಸ್ಥೆಗಳ ಮಧ್ಯಮ ಮಟ್ಟದ ನಿರ್ವಹಣಾ ಸಿಬ್ಬಂದಿಗಳಿಗೆ, ಯುವಕ-ಯುವತಿಯರಿಗೆ ಕೆಲವು ತಿಂಗಳುಗಳ ತರಬೇತಿ ನೀಡುವುದು.

3) **ಕ್ಷೇತ್ರಾಧಾರಿತ ಕಲಿಕೆ :** ಸ್ಥಳೀಯ ಸಹಕಾರಿಗಳಲ್ಲಿ ಪ್ರಾಯೋಗಿಕವಾಗಿ ಒಂದೆರಡು ದಿನಗಳ ತರಬೇತಿ ನೀಡುವುದು.

4) **ಉದ್ಯಮಶೀಲತಾ ತರಬೇತಿ :** ಸಹಕಾರಿ ವಲಯದಲ್ಲಿ ಸ್ಟಾರ್ಟ್‌ಅಪ್‌ಗಳ ಪ್ರಾರಂಭಕ್ಕೆ ಪೂರಕವಾದ ತರಬೇತಿ ನೀಡುವುದು.

5) **ಪದವಿ ಮತ್ತು ಸ್ನಾತಕೋತ್ತರ ಪದವಿ :** ಸಹಕಾರಿ ನಿರ್ವಹಣೆ, ಹಣಕಾಸು, ಕಾನೂನು, ಡಿಜಿಟಲೀಕರಣ ಮುಂತಾದ ವಿಷಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುವುದು.

6) **ಸಂಶೋಧನಾ ಪದವಿ :** ಸಹಕಾರಿಯ ಆಡಳಿತ ಮತ್ತು ಪಾರದರ್ಶಕತೆ, ಮಾರುಕಟ್ಟೆ ಮತ್ತು ಮೌಲ್ಯ ಸರಪಳಿ ವೃದ್ಧಿ, ಡಿಜಟಲ್ ರೂಪಾಂತರ ಮತ್ತು ಫಿನ್‌ಟೆಕ್, ಮಹಿಳಾ-ಯುವ ಸಬಲೀಕರಣ, ನೀತಿ ಮತ್ತು ಕಾನೂನು ಮತ್ತು ಸುಸ್ಥಿರ ಸಹಕಾರಿ ಮಾದರಿಗಳ ಬಗ್ಗೆ ಸಂಶೋಧನೆ ನಡೆಸಿ ಎಂ.ಫಿಲ್/ಪಿಹೆಚ್‌ಡಿ ಪದವಿಗಳನ್ನು ನೀಡುವುದು.




### ಡಿ) ಸಂಶೋಧನೆ ಮತ್ತು ತರಬೇತಿಯ ಮೂಲಕ ಪರಿವರ್ತನೆ :

ಶಿಕ್ಷಣ-ತರಬೇತಿ-ಸಂಶೋಧನೆಯಿಂದ ಸಹಕಾರಿ ಸಂಸ್ಥೆಗಳಲ್ಲಿ ಈ ಕೆಳಗಿನ ಬದಲಾವಣೆಗಳನ್ನು ನಿರೀಕ್ಷಿಸಬಹುದಾಗಿದೆ.

1) ಸಂಶೋಧನೆಯಿಂದ ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಮತ್ತು ಸಕ್ಕರೆ ವಲಯದಲ್ಲಿನ ಸಹಕಾರಿ ಸಂಸ್ಥೆಗಳಲ್ಲಿ ಉತ್ಪಾದಕತೆ ಮತ್ತು ಮೌಲ್ಯವರ್ಧನೆ ಹೆಚ್ಚುತ್ತದೆ.

2) ದೇಶದಾದ್ಯಂತ ಸಹಕಾರಿ ಶಿಕ್ಷಣದಲ್ಲಿ ಏಕರೂಪತೆ ಉಂಟಾಗಿ, ವೃತ್ತಿಪರ ಮಾನವ ಸಂಪನ್ಮೂಲ ಹೆಚ್ಚಾಗಿ ಕಾರ್ಯದಲ್ಲಿ ದಕ್ಷತೆ, ನೈಪುಣ್ಯತೆ ಮತ್ತು ಪಾರದರ್ಶಕತೆ ಹೆಚ್ಚಾಗುತ್ತದೆ.

3) ಸಂಶೋಧನಾ ಫಲಿತಾಂಶಗಳಿಂದ ನೀತಿ-ನಿರೂಪಣೆ, ಕಾನೂನು ಸುಧಾರಣೆ ಮತ್ತು ಡಿಜಿಟಲ್ ಪರಿವರ್ತನೆಯಲ್ಲಿ ಸಹಕಾರಿ ಸಂಸ್ಥೆಗಳು ಉನ್ನತಿ ಸಾಧಿಸುತ್ತವೆ.

4) ಗ್ರಾಮೀಣ ಉದ್ಯಮಶೀಲತೆ, ಉದ್ಯೋಗಸೃಷ್ಟಿ ಮತ್ತು ಸ್ವಾವಲಂಬನೆಗೆ ಉತ್ತೇಜನ ನೀಡುವುದರ ಮೂಲಕ ಗ್ರಾಮೀಣ ಯುವಕರು, ಮಹಿಳೆಯರು, ಅಲ್ಪಸಂಖ್ಯಾತರು, ಹಿಂದುಳಿದವರು, ದೀನ ದಲಿತರು, ರೈತರು, ಕಾರ್ಮಿಕರ ಸಬಲೀಕರಣ ಸಾಧ್ಯವಾಗುತ್ತದೆ.

ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವು, ಸಿದ್ಧಾಂತ (Theory) ಮತ್ತು ಪ್ರಾಯೋಗಿಕ (Practical) ಅಂತರವನ್ನು ಕಡಿಮೆ ಮಾಡುವ, ಗ್ರಾಮೀಣ ಪ್ರದೇಶಗಳಿಗೂ ತರಬೇತಿ ಕೇಂದ್ರಗಳನ್ನು ತೆರೆಯುವ, ಪಠ್ಯಕ್ರಮದಲ್ಲಿ ಏಕರೂಪತೆ ಮತ್ತು ಗುಣಮಟ್ಟದಲ್ಲಿ ಶ್ರೇಷ್ಠತೆ ಕಾಪಾಡುವ, ಸಂಶೋಧನೆಯ ಪರಿಣಾಮಗಳನ್ನು ತಳಮಟ್ಟದಲ್ಲಿ ಅಳವಡಿಸುವ ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಭಾರತದ ಸಹಕಾರಿ ಚಳವಳಿಯ ಆಧುನೀಕರಣ ಮತ್ತು ಗ್ರಾಮೀಣ ಅಭಿವೃದ್ಧಿಯ ಮೂಲಕ "ಸಹಕಾರದಿಂದ ಸಮೃದ್ಧಿ" ಎಂಬ ಘೋಷ ವಾಕ್ಯಕ್ಕೆ ಸಾಕ್ಷಿಭೂತವಾಗಿ ಕಾರ್ಯನಿರ್ವಹಿಸಲಿ ಎಂಬುದು ಎಲ್ಲಾ ಸಹಕಾರಿಗಳ ಆಶಯವಾಗಿದೆ.